ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

# ತಪೋವಾಣಿ

ಸಂ. 12 ಸಂ. 10 ಅಕ್ಟೋಬರ್ 2015 ರೂ.25

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಆಗಸ್ಟ್ 2011ರ ಸಂಚಿಕೆ)

ಉನ್ನತ ಲೋಕಗಳಲ್ಲಿರುವ ಸಪ್ತಋಷಿಗಳ ಸಾರಥ್ಯದಲ್ಲಿರುವ ಋಷಿಗಳಿಗೆ ಮಹರ್ಷಿ ಅಮರ (1919–1982) ರವರು ಒಂದು ವಿಶಿಷ್ಟ ವಾಹಕವಾಗಿದ್ದರು. ಅವರು ಕೆಳಕ್ಕೆ ತಂದ ಜ್ಞಾನವು, ಹಿಂದೆ ಪುರಾತನ ಋಷಿಗಳು ಈ ಧರೆಗೆ ತಂದ ಜ್ಞಾನದ ವಿಸ್ತರಣೆಯಾಗಿತ್ತು. ಈ ಜ್ಞಾನದ ಮೂಲಕ ಅವರು ಅಧ್ಯಾತ್ಮದ ಎಲ್ಲ ಸಾಧಕರಿಗೆ ಮಾರ್ಗದರ್ಶನ ಮಾಡಿದರು ಹಾಗೂ ತಾವೇ ಸ್ವತಃ ಸಂಚಯಿಸಿದ ನವಯುಗದ ಚೈತನ್ಯಗಳನ್ನು ಅವರಿಗೆ ಅನುಗ್ರಹಿಸಿದರು. ಅವರು ವಾಸವಾಗಿರುವ ದೂರದ ಒಂದು ಗ್ಯಾಲಕ್ಸಿಯಿಂದಲೇ ಅವರು ಇಂದಿಗೂ ನಮ್ಮನ್ನು ಮಾರ್ಗದರ್ಶಿಸುತ್ತಿದ್ದಾರೆಂದರೆ, ಅದು ನಾವು ಸಂತೋಷಪಡಬೇಕಾದ ವಿಷಯವೇ. ಏಕೆಂದರೆ, ಅಂತಹ ಮಾಸ್ಟರ್‌ಗಳು ಭೂಮಿಗೆ ಬರುವುದು ಬಹಳ ವಿರಳ.

ಅಧ್ಯಾತ್ಮದ ಹಾದಿಯಲ್ಲಿ ನೋವುಗಳಿಲ್ಲ ಎಂಬುದನ್ನು ಅವರು ಕಲಿಸಿದರು ಹಾಗೂ ತೋರಿಸಿದರು. ಚಕ್ರಗಳು ಕ್ರಿಯಾಶೀಲವಾದಾಗ ನೋವುಂಟಾಗುವುದಿಲ್ಲ. ಕುಂಡಲಿನಿ ಮೇಲಕ್ಕೆದ್ದಾಗ ನೋವುಂಟಾಗುವುದಿಲ್ಲ. ನಮ್ಮ ಶರೀರದಲ್ಲಿ ವಿಶೇಷ ಚೈತನ್ಯಗಳು ಕೆಲಸ ಮಾಡಲಾರಂಭಿಸಿದಾಗ ಹಾಗೂ ಅಧ್ಯಾತ್ಮ ಪ್ರಗತಿಯಲ್ಲಿ ನಾವು ದಾಪುಗಾಲಿಡಲಾರಂಭಿಸಿದಾಗ ನಮ್ಮ ವರ್ತನೆಯಲ್ಲಿ ಯಾವ ವೈಪರೀತ್ಯವೂ ಕಂಡುಬರುವುದಿಲ್ಲ. ನಿಜ ಹೇಳಬೇಕೆಂದರೆ, ಸಾಮಾನ್ಯ ಬದುಕನ್ನು ಅರ್ಥಪೂರ್ಣವಾಗಿ ಬದುಕುವುದೇ ಅಧ್ಯಾತ್ಮ ಜೀವನದ ಲಕ್ಷಣ. ಗೌರವಾನ್ವಿತ, ಉದಾತ್ತ, ವಿವೇಚನಾಯುಕ್ತ, ಮೌನಿ, ಶಾಂತಿದೂತ, ಸ್ನೇಹಮಯಿ, ಇವು ಅಧ್ಯಾತ್ಮಾನ್ವೇಷಿಯ ಕೆಲವು ಕುರುಹುಗಳು, ಅಲ್ಲದೆ, ಗುರುವಿನಲ್ಲಿರಬೇಕಾದ ಲಕ್ಷಣಗಳೂ ಹೌದು! ಅಮರರವರು ನಮಗೆ ಕಲಿಸುವುದಕ್ಕಾಗಿ ಇವೆಲ್ಲವನ್ನೂ ಬದುಕಿ ತೋರಿಸಿದರು. ಅವರು ಮೌನವಾಗಿ, ಗಾಂಭೀರ್ಯದಿಂದ ಕಲಿಸಿದರು.

ಅಮರರವರನ್ನು ಭೇಟಿಯಾಗಿರದಿದ್ದರೆ, ಈ ಅಧ್ಯಾತ್ಮ ದೈತ್ಯರಿಂದ ಕಲಿಯದೇ ಹೋಗಿದ್ದರೆ, ನಾನೂ ಬೂಟಾಟಿಗರಿಗೆ, ವಿದೂಷಕರಿಗೆ ಬಲಿಯಾಗುತ್ತಿದ್ದೆ. "ತಂದೆ ಬರುವ ಮೊದಲು ಹಲವಾರು ಕಪಟ ಪ್ರವಾದಿಗಳು ಬರುತ್ತಾರೆ," ಎಂಬ, ಕ್ರಿಸ್ತನ ಹೇಳಿಕೆಯನ್ನು ಅವರು ಆಗಾಗ ನೆನಪಿಸುತ್ತಿದ್ದರು.

ಗುರುವನ್ನು ನಿಜವಾಗಿ ಅರ್ಥಮಾಡಿಕೊಳ್ಳುವುದು ಹಾಗೂ ಅವರು ತೋರಿದ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ನೆನಪಿನ ಕಾಣಿಕೆಯಾಗಿ ಕೊಡಬಹುದಾದ ಉತ್ಕೃಷ್ಟ ಉಡುಗೊರೆ. ನಾವು ಅಮರರವರನ್ನು ಅವರ ಮಹಾಸಮಾಧಿಯ ದಿನವಾದ ಆಗಸ್ಟ್ 25ರಂದು ವಿಶೇಷವಾಗಿ ನೆನಪಿಸಿಕೊಳ್ಳುತ್ತೇವೆ.

ಮುಂಬೈ ಸ್ಫೋಟಗಳು, ಹಗರಣಗಳು, ರಾಜಕೀಯ ಕಲಹಗಳು ಮುಂತಾದ ಮಾನವಕೃತ ದುರಂತಗಳು ನಮ್ಮನ್ನು ಸಿನಿಕತನ, ಹತಾಶೆ, ನಿರಾಶೆಗಳತ್ತ ನೂಕುತ್ತವೆ. ಅದು ಸ್ವಾಭಾವಿಕ. ಆದರೆ ನಾವು ಅಷ್ಟಕ್ಕೇ ಸುಮ್ಮನಿರದೆ, ಅವುಗಳಿಂದಾಚೆ ದೃಷ್ಟಿ ಹರಿಸಬೇಕು. ನವಯುಗದ ಚೈತನ್ಯಗಳು ಹಾಗೂ ಈ ಭೂಮಿಯ ಜ್ಯೋತಿಕಾರ್ಯಕರ್ತರ ಬಗ್ಗೆ ನಮಗೆ ಅರಿವಿರಬೇಕು. ಮಾನವನ ದೋಷಗಳು ಮತ್ತು ದುರಂತಗಳ ಅಂಧಕಾರದಿಂದ ನಮ್ಮನ್ನು ಪಾರು ಮಾಡಲು ದೊಡ್ಡ ಪ್ರಯತ್ನ ನಡೆಯುತ್ತಿದೆ. ಭರವಸೆಯಿದೆ. ಮುಂದೆ ಪ್ರೀತಿಯಿದೆ, ಬದುಕಿದೆ.

ನಮ್ಮಲ್ಲಿ ಹಲವರು ಇಡೀ ಜಗತ್ತಿಗೆ ಲೈಟ್ ಚಾನಲ್ ಮಾಡುತ್ತಿದ್ದೇವೆ. ಬೆಳಕು ಕೆಲಸ ಮಾಡುತ್ತಿದೆ ಎಂದು ನಮಗೆ ತಿಳಿದಿದೆ. ನಿಧಾನವಾಗಿ ನಮಗೆ ಅದರ ಫಲಿತಾಂಶ ಕಂಡುಬರುತ್ತದೆ. ಭ್ರಷ್ಟಾಚಾರವನ್ನು ಮೂಲೋತ್ಪಾಟನೆ ಮಾಡಲು ಲೈಟ್ ಚಾನಲ್ ಮಾಡಿ ಎಂದು ನಾನು ಹೇಳಿದರೆ, ಜನರು ಈಗ ನಗಬಹುದು. ಆದರೆ ಮುಂದೊಂದು ದಿನ ಬೆಳಕಿನಿಂದ ಆಗುವ ಕ್ರಾಂತಿಗೆ ಎಲ್ಲರೂ ಸಾಕ್ಷಿಯಾಗಲಿದ್ದಾರೆ, ಎಂದು ನನಗೆ ತಿಳಿದಿದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫ಼ೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಹಿಂದಿನ ತಿಂಗಳ ನಿವಾಸಿಗಳ ಕೂಟದಲ್ಲಿ, ರಾಧೆ ಮತ್ತು ಕೃಷ್ಣರ ರೀತಿಯಲ್ಲಿ ಉಡುಪು ಧರಿಸಿ ತಪೋನಗರದ ಮಕ್ಕಳು ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸುತ್ತಿರುವುದು.

### ಸುದ್ದಿ-ಸೂಚನೆ

- ಅಮರ ಮಹಾಸಮಾಧಿ ದಿನದ ಕಾರ್ಯಕ್ರಮವನ್ನು 25-8-2015ರಂದು ಆನೇಕಲ್‌ನ ನಮ್ಮ ಸಪ್ತಋಷಿ ಧ್ಯಾನಕೇಂದ್ರದಲ್ಲಿ ಮತ್ತು 30-8-2015 ರಂದು ತಪೋನಗರದಲ್ಲಿ ಆಯೋಜಿಸಲಾಗಿತ್ತು. 50ಕ್ಕೂ ಹೆಚ್ಚು ಜನ ಆನೇಕಲ್‌ನಲ್ಲಿ ಮತ್ತು ಸುಮಾರು 225 ಜನ ತಪೋನಗರದ ಧ್ಯಾನಮಂದಿರದಲ್ಲಿ ಸೇರಿ ತಮ್ಮ ಪ್ರೀತಿ ಮತ್ತು ಗೌರವಗಳನ್ನು ಅಮರರವರಿಗೆ ಅರ್ಪಿಸಿದರು.
- ಕಿರು ಪುಸ್ತಕ 'Light' ಅನ್ನು ಇಟಾಲಿಯನ್ ಮತ್ತು ಜರ್ಮನ್ ಬಾಷೆಗಳಿಗೆ ಬಾಷಾಂತರಿಸಲಾಗಿದೆ ಮತ್ತು ಈಗ ಅದನ್ನು ನಮ್ಮ ವೆಬ್‌ಸೈಟ್ www.lightagemasters.com ನಲ್ಲಿ ಉಚಿತವಾಗಿ ಡೌನ್‌ಲೋಡ್ ಮಾಡಬಹುದಾಗಿದೆ.
- ಶಾಲಾ ಮಕ್ಕಳಿಗೆ ಲೈಟ್ ಚಾನಲಿಂಗ್ ಹೇಳಿಕೊಡಲು ನಮಗೆ ಹೆಚ್ಚಿನ ಕಾರ್ಯಕರ್ತರ ಅವಶ್ಯಕತೆಯಿದೆ. ಆಸಕ್ತಿ ಇರುವ ನಮ್ಮ ಸಾಧಕರನ್ನು ಈ ಮಹೋನ್ನತ ಕಾರ್ಯಕ್ಕಾಗಿ ನಮ್ಮೊಂದಿಗೆ ಸೇರಿಕೊಳ್ಳಲು ಸ್ವಾಗತಿಸುತ್ತೇವೆ. ವಾರದ ಯಾವುದೇ ದಿನ ಅರ್ಧದಿನ ಬಿಡುವು ಮಾಡಿಕೊಳ್ಳಲು ಸಾಧ್ಯವಾಗುವವರು ತಮ್ಮ ಹೆಸರನ್ನು ಕೊಡಬಹುದು. ಆಸಕ್ತರು ಮಾನಸ ಕಚೇರಿಯನ್ನು ದಯವಿಟ್ಟು ಸಂಪರ್ಕಿಸಿ.

### ನವರಾತ್ರಿಯ ವಿಶೇಷ ಧ್ಯಾನದ ತಂತ್ರ

ನೀಲಿ ಬಣ್ಣದ ಬೆಳಕಿನ ಒಂದು ದೊಡ್ಡ ಗೋಲವನ್ನು ಊಹಿಸಿಕೊಳ್ಳಿ. ಈ ಗೋಲವನ್ನು ನೀವು ಪ್ರವೇಶಿಸಿ. ಈ ಬೆಳಕಿನ ಗೋಲವನ್ನು ಅನುಭವಿಸಿ, ಆದಿಶಕ್ತಿಯ ಚೈತನ್ಯಗಳನ್ನು ಅನುಭವಿಸಿ. ಈ ತಂತ್ರವನ್ನು ಹತ್ತುದಿನಗಳವರೆಗೆ ನಿತ್ಯದ ನಿಮ್ಮ ಹಂತದ ಧ್ಯಾನದ ಬದಲಿಗೆ ಅಭ್ಯಾಸ ಮಾಡಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಸೋಮ | ಕೃಷ್ಣ ಅಷ್ಟಮಿ |
| 11 | ಭಾನು | ಮಾಸ ಶಿವರಾತ್ರಿ |
| 12 | ಸೋಮ | ಮಹಾಲಯ ಅಮಾವಾಸ್ಯೆ |
| 13 | ಮಂಗಳ | ನವರಾತ್ರಿ ಆರಂಭ |
| 19 | ಸೋಮ | ಸರಸ್ವತಿ ಪೂಜೆ |
| 21 | ಬುಧ | ದುರ್ಗಾಷ್ಟಮಿ |
| 22 | ಗುರು | ದಸರಾ, ಆಯುಧ ಪೂಜೆ |
| 23 | ಶುಕ್ರ | ವಿಜಯ ದಶಮಿ |
| 27 | ಮಂಗಳ | ಪೂರ್ಣಿಮೆ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12 |
| | ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 11-10-15 | ಮಧ್ಯಾಹ್ನ 2ಕ್ಕೆ ಲೈಟ್ ಚಾನಲ್ ಕಾರ್ಯಕರ್ತರ ಸಭೆ |

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

ಭಾನುವಾರದ ಉಪನ್ಯಾಸಗಳ DVDಗಳು ಸದಸ್ಯರುಗಳಿಗೆ ಲಭ್ಯವಿವೆ. ವಿವರಗಳಿಗಾಗಿ ಮಾನಸ ಆಫೀಸನ್ನು ದಯವಿಟ್ಟು ಸಂಪರ್ಕಿಸಿ.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ನಾನು ಕೆಲಸ ಮಾಡುವ ಸ್ಥಳದಲ್ಲಿ ಓರ್ವ ವ್ಯಕ್ತಿ ಬೀಗ ಹಾಕಿದ್ದ ಆಫೀಸಿನ ಬಾಗಿಲನ್ನು ಸುಮಾರು ಒಂದು ಗಂಟೆಯಿಂದ ತೆರೆಯಲು ಮಾಡುತ್ತಿದ್ದ ಪ್ರಯತ್ನ ನಿಷ್ಫಲವಾಗಿತ್ತು. ನಾನು ಅದರ ಕೀಲಿಕೈಯನ್ನು ತೆಗೆದುಕೊಂಡು, 'ನಾನು ಕೀಲಿಕೈಯನ್ನು ಹಾಕುತ್ತೇನೆ, ದಯವಿಟ್ಟು ನೀನು ಬಾಗಿಲನ್ನು ತೆರೆ' ಎಂದು ಬೆಳಕನ್ನು ಪ್ರಾರ್ಥಿಸಿದೆ. ನಾನು ಕೀಲಿಕೈ ಹಾಕಿ ತಿರುಗಿಸಿದ ಕೂಡಲೇ, ಬಾಗಿಲು ತೆರೆದುಕೊಂಡಿತು. ಒಂದು ಗಂಟೆಯಿಂದ ತೆರೆದುಕೊಳ್ಳದಿದ್ದ ಬಾಗಿಲು, ಬೆಳಕಿನ ಅನುಗ್ರಹದಿಂದ ಕ್ಷಣಮಾತ್ರದಲ್ಲಿ ತೆರೆದುಕೊಂಡಿತು! ಎಲ್ಲರಿಗೂ ಆಶ್ಚರ್ಯವಾಯಿತು.

ನಾನೀಗ ಎಲ್ಲಾ ಕೆಲಸಗಳನ್ನು ಸಾಕ್ಷೀಭಾವದಿಂದ ನೋಡಲು ಪ್ರಯತ್ನಿಸುತ್ತಿದ್ದೇನೆ. 'ನಾನು ಈ ಕೆಲಸವನ್ನು ಭೌತಿಕವಾಗಿ ಮಾಡುತ್ತೇನೆಯಾದರೂ, ಅದರ ಹಿಂದಿನ ಪ್ರೇರಣೆ ನೀನೇ ಆಗಿರುವೆ,' ಎಂದು ಪ್ರತಿ ಬಾರಿಯೂ ನಾನು ಬೆಳಕನ್ನು ಪ್ರಾರ್ಥಿಸುತ್ತೇನೆ. ಈ ಆಲೋಚನೆಯ ನಂತರ ಕೆಲಸವು ಅತ್ಯಂತ ಉತ್ತಮವಾಗಿ ಯಾವುದೇ ತಪ್ಪುಗಳಿಲ್ಲದೆ ಆಗುತ್ತದೆ. ನನಗೆ ಯಾವುದಾದರೊಂದು ಕೆಲಸವನ್ನು ಮುಗಿಸಲು ಯಾರದಾದರೂ ಸಹಾಯ ಬೇಕಾಗಿದ್ದರೆ, ನನಗೆ ಸಂಪೂರ್ಣ ಸಹಕಾರ ದೊರಕುತ್ತದೆ ಮತ್ತು ಕೆಲಸವು ಶಾಂತಿಯುತವಾಗಿ ನಡೆಯುತ್ತದೆ. ನಾನು ಪ್ರತಿಕ್ಷಣವೂ ಬೆಳಕಿನ ಮಾರ್ಗದರ್ಶನವನ್ನು ಅನುಭವಿಸುತ್ತೇನೆ.

ಎಂದಾದರೂ ಯಾವುದೇ ನಕಾರಾತ್ಮಕತೆ ನನ್ನನ್ನು ಪ್ರವೇಶಿಸಲು ಪ್ರಯತ್ನಿಸಿದರೆ, ನಾನು ಅದನ್ನು ಹೊರಗಿಡಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ. ಬೆಳಕಿನ ಮೇಲೆ ನನಗಿರುವ ನಂಬಿಕೆ, ಪ್ರತಿ ಬಾರಿಯೂ ನನಗೆ ಸಹಾಯ ಮಾಡುತ್ತದೆ. ನಾನು ನನ್ನ ಜೀವನದ ಪ್ರತಿಯೊಂದು ವಿಷಯದಲ್ಲೂ ಬೆಳಕಿನ ಸಹಾಯ ತೆಗೆದುಕೊಳ್ಳುವುದರಿಂದ, ಅದು ನನ್ನನ್ನು ನಿಶ್ಚಿಂತನನ್ನಾಗಿಸಿದೆ. ಬೆಳಕಿನ ಸಾಮೀಪ್ಯದಲ್ಲಿ ನಾನು ಸಂಪೂರ್ಣ ಸುರಕ್ಷಿತ ಎಂದೆನಿಸುತ್ತದೆ.

– ಸೌರಭ್ ಜೋಶಿ, ಲೈಟ್ ಚಾನಲ್

ನನ್ನ ಅಂತರಂಗ ಲೈಟ್ ಚಾನಲಿಂಗ್‌ನಲ್ಲಿರುವುದರಿಂದ, ಇನ್ನೆಂದೂ ನನಗೆ ಭಯವಾಗುವುದಿಲ್ಲ. ನನಗೆ ಹಿತವಾದ ಅನುಭವವಾಗುತ್ತಿದೆ.

– ಧನುಷ್, 6ನೇ ತರಗತಿ, ಇನ್‌ಸೈಟ್ ಅಕಾಡೆಮಿ, ಬೆಂಗಳೂರು.

ನಾನು ಉಲ್ಲಾಸಭರಿತಳಾಗಿದ್ದು, ಎಲ್ಲರೂ ಶಾಂತಿಯಿಂದಿರುವಂತೆ ಮತ್ತು ಎಲ್ಲರ ಅಂತರ್ಯದಲ್ಲಿ ದೇವರಿರುವಂತೆ ಅನಿಸುತ್ತದೆ.

– ನಿಹಾರಿಕಾ, 5ನೇ ತರಗತಿ, ಇನ್‌ಸೈಟ್ ಅಕಾಡೆಮಿ, ಬೆಂಗಳೂರು.

ಜರಗನಹಳ್ಳಿಯ ಶ್ರೇಯಾಸ್ ಪಬ್ಲಿಕ್ ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸುವಾಗ ನನಗೆ ಅಗಾಧ ಶಾಂತಿ ಮತ್ತು ಚೈತನ್ಯದ ಅನುಭವವಾಯಿತು. ಅಲ್ಲಿದ್ದ ಚೈತನ್ಯವನ್ನು ಹಾಗೂ ಈ ಲೈಟ್ ಚಾನಲಿಂಗ್ ಕಾರ್ಯಕ್ರಮದಲ್ಲಿ ಸುಂದರವಾದ ಮಕ್ಕಳು ಸಂಪೂರ್ಣವಾಗಿ ಭಾಗವಹಿಸುತ್ತಿದ್ದುದನ್ನು ಅನುಭವಿಸಲು, ನಾನು ಸ್ವಲ್ಪ ಕಾಲ ಸೂಚನೆ ನೀಡುವುದನ್ನು ನಿಲ್ಲಿಸಿದೆ.

– ಅನಿತಾ ಕೆ.ಎ., ಕಾರ್ಯಕರ್ತೆ

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ವರ್ಷಾ ದೀಪಕ್**

ಆಗಸ್ಟ್ ತಿಂಗಳ ನಿವಾಸಿಗಳ ಕೂಟದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಕೃಷ್ಣನ ಚಿಕ್ಕ ಗಂಧದ ಮೂರ್ತಿಯಿಟ್ಟು, ಅದರ ಸುತ್ತಲೂ ವಿಶೇಷವಾದ ಹೂವಿನ ಅಲಂಕಾರವನ್ನು ಮಾಡಲಾಗಿತ್ತು. ಆರು ವರ್ಷ ವಯಸ್ಸಿನ ಮಕ್ಕಳಾದ ರಕ್ಷಿತ್ ಮತ್ತು ಸಾಯುಜ್ಯ, ಹಾಗೂ ಶ್ರವಣ್ ಮತ್ತು ಯುತಿಕಾರವರು, ದೈವೀ ಜೋಡಿಯಾದ ರಾಧಾ–ಕೃಷ್ಣರ ವೇಷತೊಟ್ಟು ಹಾಲ್‌ನ ಒಳಗೆ ಪ್ರವೇಶಿಸಿದಾಗ ಎಲ್ಲರೂ ಉತ್ಸಾಹ ಭರಿತರಾದರು. ಅಲ್ಲಿ ನೆರೆದಿದ್ದವರೆಲ್ಲರೂ ಮುಂಚಿತವಾಗಿಯೇ ನವಿಲುಗರಿಯೊಂದಿಗೆ ಅವರಿಗೆ ನೀಡಿದ್ದ ಗುಲಾಬಿ ಎಸಳುಗಳನ್ನು ಈ ಮಕ್ಕಳ ಮೇಲೆ ಸುರಿಸಿದರು. ಅತ್ಯಂತ ಸೊಗಸಾಗಿ ಕಾಣಿಸುತ್ತಿದ್ದ ಈ ಎರಡೂ ಜೋಡಿಗಳು ಒಂದು ಸಂಗೀತದ ತುಣುಕಿಗೆ ನೃತ್ಯ ಮಾಡಿದರು. ತಮ್ಮದೇ ರೀತಿಯ ಮುಗ್ಧತೆಯಿಂದ ತಡವರಿಸುತ್ತಾ ಮುದ್ದಾದ ಈ ಮಕ್ಕಳು ಎಲ್ಲರ ಹೃದಯಗಳಲ್ಲೂ ಪ್ರೀತಿ ತುಂಬಿತುಳುಕುವಂತೆ ಮಾಡಿದರು.

ಇಶಿತಾ, ಹದಿಹರೆಯದ ಹೊಸ್ತಿಲಲ್ಲಿರುವ ಸುಂದರವಾದ ಹುಡುಗಿ, ಗೋಪಿಕೆಯಾಗಿ ಒಂದು ನೃತ್ಯವನ್ನು ಪ್ರಸ್ತುತ ಪಡಿಸಿದಳು. ವೀಕ್ಷಕರು ಅವಳ ನೃತ್ಯದ ಸಮ್ಮೋಹನದಿಂದ ಹೊರಬಂದು ಆಕೆಗೆ ತಮ್ಮ ಮೆಚ್ಚುಗೆಯನ್ನು ಪೂರ್ತಿಯಾಗಿ ಸೂಚಿಸುವ ಮೊದಲೇ, ಚಿಕ್ಕ ಹುಡುಗಿ ವಿಶ್ರುತಿಯು ಯಾವುದೇ ನ್ಯೂನತೆಗಳಿಲ್ಲದೆ ಪಠಿಸಿದ ಭಗವದ್ಗೀತೆಯ ಮೊದಲ ಹತ್ತು ಶ್ಲೋಕಗಳಿಂದಾಗಿ ಮೂಕವಿಸ್ಮಿತರಾದರು. ಮಕ್ಕಳಾದ ಸಾತ್ವಿಕ್ ಮತ್ತು ಶ್ರುತಿ, ಶ್ರೀಕೃಷ್ಣನ ಜೀವನಾಧಾರಿತ ರಸಪ್ರಶ್ನೆಗಳನ್ನು ಕೇಳಿದರು. ಕೊನೆಯಲ್ಲಿ ಉಪಾಸನಾ ಒಂದು ಭಕ್ತಿಗೀತೆಯನ್ನು ಹಾಡಿದಳು. ಪ್ರೊಜೆಕ್ಟರ್‌ನಲ್ಲಿ ಒಂದು ಮಗುವು ಹಾಡಿದ ಕೃಷ್ಣ ಭಜನೆಯ ವೀಡಿಯೋವನ್ನು ತೋರಿಸಲಾಯಿತು. ಇದೇ ವೀಡಿಯೋವನ್ನು ಕೆಲವು ವರ್ಷಗಳ ಹಿಂದೆ ಗುರೂಜಿಯವರು ನೋಡಿ ಬಹಳ ಇಷ್ಟಪಟ್ಟಿದ್ದರಿಂದಾಗಿ ಅದನ್ನು ತೋರಿಸಲಾಯಿತು.

ಗುರೂಜಿಯವರ ದಿವ್ಯ ವಿಷನ್‌ನಲ್ಲಿ, ಭಗವಾನ್ ಕೃಷ್ಣ, ಈ ಭೂಮಿಯು ತಪೋನಗರವಾಗಲಿ ಎಂದು ಸೂಚಿಸಿದ್ದರು. ಗುರೂಜಿ ಕೃಷ್ಣಾನಂದರವರು ಈ ಭೂಮಿಯಲ್ಲಿ ಮಾತ್ರವಲ್ಲದೆ, ನಿವಾಸಿ ಹಾಗೂ ಅನಿವಾಸಿ ತಪೋನಗರಿಗರ ಹೃದಯದಲ್ಲಿ ತಪೋನಗರವನ್ನು ಅಭಿವ್ಯಕ್ತಿಸಿದ್ದಾರೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

**ಸಂ: ಶೋಭಾ ಕೆ. ರಾವ್; ಅನು: ಸುಧಾಕರ್**

ಫೆಬ್ರವರಿ 2005

ಅಮರರವರ ಬಗ್ಗೆ ಇರುವ ನಮ್ಮ ಭಾವನೆಗಳನ್ನು ಮತ್ತು ಭಾವುಕತೆಗಳನ್ನು ವ್ಯಕ್ತಪಡಿಸುವ ದಿನವಿದು. ನಿಮ್ಮಲ್ಲಿ ಪ್ರತಿಯೊಬ್ಬರಲ್ಲೂ ಅಮರರವರನ್ನು ಬೆಳಕಾಗಿ ಕಾಣುವುದು ನನಗೆ ಸಂತೋಷಕರ ವಿಷಯ ಎಂದು ನಾನು ನಿಮಗೆ ತಿಳಿಸಬಯಸುತ್ತೇನೆ. ನನಗೊಂದು ಕುಟುಂಬವಿರುವುದನ್ನು ನೋಡಲು ನನಗೆ ಸಂತೋಷವೆನಿಸುತ್ತದೆ. ನೀವೇ ನನ್ನ ಕುಟುಂಬ. ನಿಮ್ಮನ್ನು ಗುಂಪುಗಳಲ್ಲಿ ಅಥವ ವೈಯಕ್ತಿಕವಾಗಿಯೂ ಭೇಟಿಮಾಡುವುದರಲ್ಲಿ ಎಂತಹ ಸಾಮೀಪ್ಯತೆ, ಆತ್ಮೀಯತೆ ಮತ್ತು ಸಮಾಧಾನವಿರುತ್ತದೆ. ನನ್ನ ಇತಿಮಿತಿಗಳು ನನಗೆ ತಿಳಿದಿವೆ. ನನ್ನ ಜವಾಬ್ದಾರಿಗಳೂ ನನಗೆ ತಿಳಿದಿವೆ. ಭೌತಿಕ ಮಟ್ಟದ ಕೆಲವು ಕೆಲಸಗಳನ್ನು ನಾನು ಪೂರ್ತಿಗೊಳಿಸಬೇಕು ಹಾಗೂ ಸೂಕ್ಷ್ಮ ಮಟ್ಟದಲ್ಲಿ ಕೆಲಸವನ್ನು ಮುಂದುವರಿಸುತ್ತೇನೆ. ಅದಕ್ಕೆ ನನ್ನ ಗುರುವಿನ ಪ್ರೀತಿ ಬೇಕು ಹಾಗೂ ಬಹಳ ಏಕಾಂತದ ಸಮಯ ಬೇಕು. ನಿಮ್ಮೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ, ನನ್ನ ಕಾರ್ಯಕರ್ತರಿಗೆ ಆಭಾರಿಯಾಗಿದ್ದೇನೆ. ಅವರು ಕೆಲಸದಲ್ಲಿ ಆಸಕ್ತಿಯಿಂದ ತೊಡಗಿಕೊಳ್ಳುವುದನ್ನು, ಅವರ ಕೆಲಸದ ಹಿಂದಿನ ಪ್ರೀತಿಯನ್ನು ನೀವು ನೋಡಬೇಕು. ಈ ಕಾರಣದಿಂದಾಗಿಯೇ ನನ್ನ ಯಾವುದೇ ಒಬ್ಬ ಕಾರ್ಯಕರ್ತರನ್ನು ಉಪೇಕ್ಷಿಸಿದಾಗ ನನಗೆ ನೋವುಂಟಾಗುತ್ತದೆ. ಅವರು ನನ್ನ ವಿಸ್ತೃತ ಭಾಗ; ನಿಮ್ಮಂತೆಯೇ. ನಾನು ಜನರನ್ನು ಮರೆಯುವುದಿಲ್ಲ. ಕೆಲವರು ಆಕಾಶದಲ್ಲಿನ ನಕ್ಷತ್ರಗಳಾಗಿದ್ದಾರೆ ಎಂದು ಎರಡು ತಿಂಗಳ ಹಿಂದೆ ನಮ್ಮ ವಾರ್ತಾಪತ್ರದಲ್ಲಿ ಬರೆದಿದ್ದೆ. ನನಗೆ ಹತ್ತಿರವಾಗಿದ್ದವರು ತುಂಬ ದೂರವಾಗಿದ್ದಾರೆ ಎನ್ನುವುದು ನನ್ನ ಅರ್ಥವಾಗಿತ್ತು, ನಕ್ಷತ್ರಗಳಿಗೆ ನಾನು ಕಾಣುವುದಿಲ್ಲ; ದೂರದ ಬಗ್ಗೆ ನಾನು ಮಾತನಾಡುತ್ತಿದ್ದೆ. ಅದು ದುಃಖಕರ ವಿಷಯ. ನನಗೆ ತುಂಬ ಹತ್ತಿರವಾಗಿದ್ದವರು ನಿಜವಾಗಿಯೂ ನಕ್ಷತ್ರಗಳಾಗಿದ್ದಾರೆ ಎಂದು ನನ್ನ ಸ್ನೇಹಿತರೊಬ್ಬರು ಅರ್ಥಮಾಡಿಕೊಂಡಿದ್ದರು!

ಅಮರರವರು ಹೇಳಿಕೊಟ್ಟ ನಿಯಮಗಳನ್ನು ಜೀವನದಲ್ಲಿ ಪಾಲಿಸುವುದರ ಮೂಲಕ ನಾವು ಅವರಿಗೆ ಕೃತಜ್ಞತೆಗಳನ್ನು ವ್ಯಕ್ತಪಡಿಸಬಹುದು, ವಜ್ರದ ಕಿರೀಟವನ್ನು ಮಾಡಿಸುವುದಕ್ಕೆ ಬಯಸುವುದರ ಮೂಲಕ ಅಥವ ಅಷ್ಟೋತ್ತರಗಳೊಂದಿಗೆ ಪೂಜಿಸುವುದರ ಮೂಲಕವಲ್ಲ. ಅವುಗಳನ್ನು ಯಾರು ಬೇಕಾದರೂ ಮಾಡಬಹುದು, ಆದರೆ ನಿಯಮಗಳನ್ನು ಪಾಲಿಸುವುದು ಸುಲಭವಲ್ಲ. ಏನನ್ನಾದರೂ ಮಾಡುವುದರಲ್ಲಿ, ಏನನ್ನಾದರೂ ಆಯ್ಕೆ ಮಾಡಿಕೊಳ್ಳುವುದರಲ್ಲಿ ನಾವು ತುಂಬ ತಿಳುವಳಿಕೆಯಿಂದಿರಬೇಕು. ನಾವು ದೈವವನ್ನು ಅಭಿವ್ಯಕ್ತಗೊಳಿಸಬೇಕು. ಸದಾ ನಗುತ್ತಿರುವ ಮೂಲಕ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕು. ನಾವು ಪ್ರೀತಿಯ ತರಂಗಗಳನ್ನು ಹೊರಹೊಮ್ಮಿಸಬೇಕು. ಪ್ರತಿ ಕ್ಷಣವನ್ನೂ ಶಾಂತಿಪೂರ್ಣವಾಗಿಸಬೇಕು. ಅಮರರವರಿಗೆ ನಾವು ಬದ್ಧರಾಗಿರಬೇಕು.

ಈ ಜೀವನವನ್ನು ಸಂಪೂರ್ಣವಾಗಿ ಬಾಳುವುದು ಮತ್ತು ಮುಕ್ತಿಯ ಬಗ್ಗೆ ಚಿಂತಿಸದಿರುವುದು ಅತಿ ಮುಖ್ಯ. ನಮ್ಮ ಈಗಿನ ಜೀವನವನ್ನು ಮತ್ತು ಜವಾಬ್ದಾರಿಗಳನ್ನು ಕಡೆಗಣಿಸುತ್ತ ಮುಕ್ತಿಗೆ ಪ್ರಾಮುಖ್ಯತೆಯನ್ನು ಕೊಡಬೇಕೆನ್ನುವ ತಪ್ಪು ಅಭಿಪ್ರಾಯವಿದೆ. ಆ ರೀತಿಯಲ್ಲಿ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲ. ನಾವು ಸಮಾಜದಲ್ಲಿಯೇ ಬದುಕಬೇಕು. ಆಗ ಮಾತ್ರವೇ ಬೆಳೆಯಲು ಸಾಧ್ಯ. ಗುಹೆಗಳಿಗೆ ಹೋಗಿ ತಪಸ್ಸು ಮಾಡಲು ನಾವಿಲ್ಲಿಗೆ ಬಂದಿಲ್ಲ. ಈ ಉದ್ದೇಶಕ್ಕಾಗಿಯೇ ಕೆಲವರು ಬಂದಿದ್ದಾರೆ. ಸಾಧಾರಣ ಜನರಾದ ನಾವು ಈ ಸಮಾಜದಲ್ಲಿಯೇ ಬದುಕಬೇಕು.

ಪ್ರೀತಿಗೂ ಮತ್ತು ವ್ಯಾಮೋಹಕ್ಕೂ ವ್ಯತ್ಯಾಸವಿದೆ. ವ್ಯಾಮೋಹ ಮನಸ್ಸಿಗೆ ಸಂಬಂಧಿಸಿದ್ದಾದರೆ ಪ್ರೀತಿ ಆತ್ಮದಿಂದ ಬರುತ್ತದೆ. ಪ್ರೀತಿಯಲ್ಲಿ ಸ್ವಾತಂತ್ರ್ಯವಿರುತ್ತದೆ, ವ್ಯಾಮೋಹದಲ್ಲಿ ಯಾವಾಗಲೂ ಬಂಧನವಿರುತ್ತದೆ. ನಾವು ಆಧ್ಯಾತ್ಮಿಕವಾಗಿ ಬೆಳೆಯಬೇಕು. ನಮ್ಮ ಉದ್ದೇಶ ಶುದ್ಧವಾಗಿ, ಪ್ರಾಮಾಣಿಕವಾಗಿ ಮತ್ತು ನೈಜವಾಗಿರಬೇಕು, ತೋರಿಕೆಯದಾಗಿರಬಾರದು. ಬೆಳೆಯಲು ಇರುವುದು ಒಂದೇ ಒಂದು ಅಡಚಣೆ, ಅದು ನಮ್ಮ ಅಹಂ. ಈ ಅಹಂಅನ್ನು ನಾವು ದೂರ ತಳ್ಳಬೇಕು. ಅಹಂ, ನಮ್ಮ ಮತ್ತು ದೇವರ ಮಧ್ಯೆ ಅಂತರವನ್ನುಂಟುಮಾಡುತ್ತದೆ. ಅದು ಎಲ್ಲ ರೀತಿಯ ಅಂತರಗಳನ್ನುಂಟುಮಾಡುತ್ತದೆ.

ನಾವು ಓದಬೇಕು, ಚಿಂತನೆಮಾಡಬೇಕು ಮತ್ತು ಪ್ರಶ್ನೆಗಳನ್ನು ಕೇಳಬೇಕು. ಸಾಧನೆಯ ಬಗ್ಗೆ, ಗುರಿಯ ಬಗ್ಗೆ ನಾನು ತಿಳಿಸಿದಾಗ, ಜನರು ತಕ್ಷಣವೇ ಅದನ್ನು ಒಪ್ಪಿಕೊಳ್ಳುತ್ತಾರೆ. ಅದನ್ನು ತಿಳಿಯುವುದು ಅವರಿಗೆ ಕಷ್ಟ, ನನಗೆ ಸುಲಭ ಎಂದಲ್ಲ. ನನ್ನಲ್ಲೇನೋ ಹಿರಿಮೆಯಿದೆ ಎಂದಲ್ಲ. ಅದು ಹಾಗಲ್ಲ. ಹಿರಿಮೆಯಿರುವುದು ದೇವರಲ್ಲಿ. ಪ್ರತಿಯೊಂದರ ಹಿಂದೆಯೂ ಸತ್ಯದ ಮತ್ತು ಪ್ರಾಮಾಣಿಕತೆಯ ಶಕ್ತಿಯಿದೆ. ಇಲ್ಲಿರುವ ಪ್ರತಿಯೊಬ್ಬರೂ ಋಷಿಗಳಾಗಬೇಕೆನ್ನುವುದನ್ನು ನಾವಿಲ್ಲಿ ನಿರೀಕ್ಷಿಸುತ್ತೇವೆ. ನೀವು ಪ್ರಶ್ನೆಗಳನ್ನು ಕೇಳಬೇಕು ಆದರೆ ಪ್ರಶ್ನಿಸುವುದು ಅಥವ ಅನುಮಾನಿಸುವುದರಲ್ಲಿ ತೊಡಗಬಾರದು. ಜ್ಞಾನವನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದಕ್ಕಾಗಿ ಪ್ರಶ್ನೆಗಳನ್ನು ಕೇಳಬೇಕು. ಅದನ್ನೂ ದಾಟಿ ಹೋಗಬೇಕು. ನಾವು ಮಕ್ಕಳಂತಾಗಿ ಮುಗ್ಧತೆಗೆ ಹಿಂದಿರುಗಬೇಕು. ಮುಗ್ಧತೆಯಿಲ್ಲದೆ ದೇವರನ್ನು ತಲುಪಲು ಆಗುವುದಿಲ್ಲ. ಸದ್ದಿಲ್ಲದ ಕ್ರಾಂತಿಯು ಬೆಳೆಯುತ್ತಿದೆ, ಅದರ ಅರಿವಿನಲ್ಲಿರೋಣ. ಇನ್ನೂ ಹೆಚ್ಚಿನ ಜನರು ಸೇರುತ್ತಾರೆ. ನಮ್ಮ ಗುಂಪು ಮಾತ್ರವಲ್ಲ, ಇನ್ನೂ ಅನೇಕರು ಇದಕ್ಕೆ ಜಾಗೃತಗೊಳ್ಳುತ್ತಾರೆ. ಈ ಪ್ರಪಂಚದಲ್ಲಿ ಬಹಳಷ್ಟು ಬೆಳಕಿದೆ. ಆದರೂ ಅದು ಸಾಕಾಗುವುದಿಲ್ಲವೆಂದು ನನಗೆ ತಿಳಿದಿದೆ. ಈ ಕಾಲಚಕ್ರದಲ್ಲಿ ಹೆಚ್ಚು ಧ್ಯಾನಿಗಳಿದ್ದಾರೆಂದು ಋಷಿಗಳು ತಿಳಿಸಿದ್ದಾರೆ. ಅದರಿಂದಾಗಿಯೇ ಋಷಿಗಳಿಗೆ 3ನೇ ಮಹಾಯುದ್ಧವನ್ನು ಮುಂದೂಡಲು ಸಾಧ್ಯವಾಯಿತು. ಆದರೆ ನಮ್ಮಲ್ಲಿರುವ ಬೆಳಕು ಸಾಲದು. ಸುನಾಮಿಯನ್ನು ನಮ್ಮಿಂದ ತಪ್ಪಿಸಲಾಗಲಿಲ್ಲ. ಇಲ್ಲಿ ಋಷಿಗಳು ಅಸಹಾಯಕರು. ಅವರು ನಿಯಮಗಳಿಗೆ ಒಳಪಟ್ಟಿದ್ದಾರೆ. ನಾವು ಹೆಚ್ಚು ಬೆಳಕನ್ನು ತಂದು ಇಂಥವುಗಳನ್ನು ತಪ್ಪಿಸಬೇಕು. ಕನಿಷ್ಠ ಇಷ್ಟನ್ನಾದರೂ ಮಾಡದಿದ್ದರೆ, ನಾವು ಅಮರರವರಿಗೆ ನ್ಯಾಯವನ್ನು ಸಲ್ಲಿಸಿದಂತೆ ಆಗುವುದಿಲ್ಲ. ಅಮರರವರು ದೂರುತ್ತಿಲ್ಲ. ಅವರು ಸಂತೋಷದಿಂದಿದ್ದಾರೆ. ಆದರೆ ನಾವು ಅವರ ಸಂಪರ್ಕವನ್ನು ಕಡಿದುಕೊಳ್ಳಬೇಕಾಗಬಹುದು.

'ನಮ್ಮನ್ನು ಸೇರುವ ಆಲೋಚನೆ ನಿಮಗೆ ಬಂದ ಕ್ಷಣವೇ, ಋಷಿಗಳ ಕೆಲಸಕ್ಕೆ ಸೇರಿ. ಸುಮ್ಮನೆ ನೆಗೆದುಬಿಡಿ. ಆಲೋಚಿಸಿದಷ್ಟೂ ನಿಮಗೆ ನಿರ್ಧಾರ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ' ಎಂದು ಅಮರರವರು ಹೇಳಿದ್ದರು. ನಾನು ಸೇರಲು ನಿರ್ಧರಿಸಿದೆ. ನನ್ನ ಕುಟುಂಬ ಮತ್ತು ಇನ್ನೂ ಸಣ್ಣ ವಯಸ್ಸಿನವರಾಗಿದ್ದ ನನ್ನ ಮಕ್ಕಳಿಂದ ಒಪ್ಪಿಗೆ ಪಡೆದೆ. ನಾವು ಏನನ್ನಾದರೂ ಸಾಧಿಸಿದೆವೆಂದುಕೊಳ್ಳುತ್ತೇವೆ. ಸತ್ಯವೆಂದರೆ, ಗುರುವಿನ ಮತ್ತು ದೇವರ ಕೃಪೆ ಯಾವಾಗಲೂ ಇರುತ್ತದೆ. ಯಾವಾಗಲೂ ಕೃಪೆಯೇ ಕೆಲಸ ಮಾಡುತ್ತದೆ. ಅದು ಸಮೃದ್ಧವಾಗಿದೆ. ಇಲ್ಲಿ ನೀರಿನ ಕೊರತೆಯಿದೆ. ಕೊಳವೆ ಬಾವಿಗಳು ಫಲಕಾರಿಯಾಗಲಿಲ್ಲ. ಆದರೆ ಕೃಪೆ ಸೋಲಲಿಲ್ಲ. ದೇವರು ಅವನದೇ ಆದ ರೀತಿಗಳಲ್ಲಿ ನಮ್ಮ ಬಳಿ ಬರುತ್ತಾನೆ. ಅವನು ನಮ್ಮ ಎದುರು ಬಂದು ನಿಲ್ಲುವುದಿಲ್ಲ. ಅವನು ಸಮಸ್ಯೆಯ ರೀತಿಯಲ್ಲಿ ಬರುತ್ತಾನೆ, ಕೃಪೆಯ ರೀತಿಯಲ್ಲಿ ಬರುತ್ತಾನೆ. ಅವನು ಸಮಸ್ಯೆಯಾಗಿ ಬಂದಾಗ ಮಾತ್ರವೇ ಅವನನ್ನು ನೆನೆಯುತ್ತೇವೆ. ನಾನು ಚಿಂತೆ ಮಾಡಲೇ ಇಲ್ಲ. ಈಗ ನಮಗೆ ನೀರಿದೆ. ಕೃಪೆ ಯಾವಾಗಲೂ ಕೆಲಸ ಮಾಡುತ್ತದೆ, ಎಂದಿಗೂ ಸೋಲುವುದಿಲ್ಲ.

ಈ ದಿನ, ಸಾಧ್ಯವಾದರೆ ನಾನು ಏಕಾಂತದಲ್ಲಿರಲು ಬಯಸುತ್ತೇನೆ, ಆದರೆ ಅದು ಸಾಧ್ಯವಿಲ್ಲ. ಜನರೊಂದಿಗಿರಲು ನಾನು ಇಷ್ಟಪಡುತ್ತೇನೆ. ನನ್ನ ಒಂದು ಭಾಗ ಸದಾ ಏಕಾಂತದಲ್ಲಿದ್ದು ನನ್ನ ಗುರುವಿನೊಂದಿಗಿರುತ್ತದೆ. ನನಗೆ ಇದೊಂದು ತುಂಬ ಆಸಕ್ತಿದಾಯಕ ದಿನ. ಅಮರರವರನ್ನು ನಿಮ್ಮಲ್ಲಿ ಹೊಂದಿರಿ. ಪ್ರೀತಿಯನ್ನು ಅಭಿವ್ಯಕ್ತಿಸಿ, ಅಮರ ರವರನ್ನು ಅಭಿವ್ಯಕ್ತಿಸಿ.

ಅಮರ ಜಯಂತಿಯ ದಿನವಾದ ಫೆಬ್ರವರಿ 1ರಂದು, ಆ್ಯಂಡ್ರಾಮಿಡ ಗ್ಯಾಲಕ್ಸಿಯಿಂದ ಅಮರರವರು ಹೊಸ ಚೈತನ್ಯಗಳನ್ನು ತಂದರು, ಅದನ್ನು ನಮ್ಮ ಮನೋಮಯ ಕೋಶಗಳಿಗೆ ಸೇರಿಸಲಾಯಿತು. ಇಲ್ಲಿದ್ದವರು ಹಾಗೂ ಇಲ್ಲಿಲ್ಲದವರಿಗೆ ಕೂಡ ಈ ಚೈತನ್ಯಗಳನ್ನು ಕೊಡಲಾಯಿತು. ಇಂತಹ ಕೊಡುಗೆಗಳನ್ನು ಅಮರರವರಿಂದ ಪಡೆಯುತ್ತಲೇ ಹೋಗೋಣ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

22-6-2014

ನಾವು ಕೆಲವರು ಅನೇಕ ವಿಷಯಗಳ ಬಗ್ಗೆ ಹಾಗೆಯೇ ಮಾತನಾಡುತ್ತಿದ್ದೆವು. ಆಗ ಒಬ್ಬರು, ಈ ಜೀವನ ಮಾಯಾ ಪ್ರಪಂಚದಂತೆನಿಸುತ್ತದೆ ಎಂದು ಹೇಳಿದರು. ಅದೆಷ್ಟು ನಿಜ! ಜೀವನದ ಹರಿವು ಎಂದಿಗೂ ನಿಲ್ಲುವುದಿಲ್ಲ. ಅದು ಎಂದೆಂದಿಗೂ ಹರಿಯುತ್ತಿರುತ್ತದೆ. ಈ ಭೂಮಿಯ ಮೇಲಿನ ಸುಂದರ ಜೀವನವನ್ನು ದೇವರು ಹೇಗೆ ಕಲ್ಪಿಸಿಕೊಂಡ ಎಂದು ನಾವು ಆಶ್ಚರ್ಯಪಡುತ್ತಿದ್ದೆವು. ಅವನಲ್ಲಿ ಎಷ್ಟೊಂದು ಬುದ್ಧಿಯಿರಬೇಕು! ಅವನಲ್ಲಿ ಎಷ್ಟೊಂದು ಪ್ರೀತಿ ಮತ್ತು ಸೃಜನಾತ್ಮಕತೆ ಇರಬೇಕು!

ಮಧ್ಯ ಪ್ರಾಚ್ಯದ ನಿರಾಶ್ರಿತರ ಶಿಬಿರಗಳಲ್ಲಿ ಕೂಡ ಹೇಗೋ ಜೀವನ ಸಾಗುತ್ತದೆ. ಲಕ್ಷಾಂತರ ಜನರು ಈ ಶಿಬಿರಗಳಲ್ಲಿದ್ದಾರೆ. ಅವರ ಭವಿಷ್ಯವೇನು? ಅದೊಂದು ಪ್ರಶ್ನೆಯಾಗಿಯೇ ಉಳಿದಿದೆ. ಅದು ನಮಗೆ ತಿಳಿದಿಲ್ಲ. ಎಲ್ಲವೂ ಅನಿಶ್ಚಿತವಾಗಿದೆ. ಆದರೂ ಜೀವನ ನಡೆಯುತ್ತದೆ. ಅಲ್ಲಿನ ಮಕ್ಕಳ ನಗು ಮುಂದುವರಿಯುತ್ತದೆ. ಮಕ್ಕಳಲ್ಲಿ ಇಂತಹ ಅತ್ಯಾಶ್ಚರ್ಯಕರ ಜೀವಶಕ್ತಿ ಇದೆ. ಅವರಿರುವ ಕಷ್ಟದ ಪರಿಸ್ಥಿತಿ ಅವರ ಮೇಲೆ ಪರಿಣಾಮ ಬೀರುವುದಿಲ್ಲ. ತಂದೆ ತಾಯಿಯರ ಮೇಲಿನ ಅವರ ಅಪಾರ ನಂಬಿಕೆ, ಎಂತಹ ಸನ್ನಿವೇಶಕ್ಕೂ ಅವರು ಹೊಂದಿಕೊಳ್ಳುವಂತೆ ಮಾಡುತ್ತದೆ.

ಜನರಿಗೆ ಈ ರೀತಿಯ ಜೀವನ ಇರಬೇಕಾಗಿಲ್ಲ. ಈ ರೀತಿ ಇರಬಾರದು. ಗೌರವಯುತ ಬಾಳಿಗೆ ನಾವೆಲ್ಲರೂ ಅರ್ಹರಿದ್ದೇವೆ. ಕೆಲವೇ ವ್ಯಕ್ತಿಗಳಿಂದಾಗಿ, ಎಷ್ಟೊಂದು ಜನರು ಕಷ್ಟ ಪಡಬೇಕಾಗಿದೆ. ಹೀಗೇಕೆ ಆಗುತ್ತಿದೆ? ಈ ಭೂಮಿಯ ಜನರು ಇಂತಹ ದುಷ್ಕೃತ್ಯಗಳನ್ನೇಕೆ ಎದುರಿಸಬೇಕು? ಇವುಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ, ಅದು ತುಂಬ ಜಟಿಲವಾಗಿದೆ.

ಮನುಕುಲದ ಒಳ್ಳೆಯತನ ಹಾಗೂ ಪ್ರೀತಿಯ ಒಟ್ಟಾರೆ ತರಂಗಗಳು, ಈ ಭೂಮಿಯ ಮೇಲಿನ ಅನ್ಯಾಯವನ್ನು ಮತ್ತು ಕತ್ತಲನ್ನು ಸಂಪೂರ್ಣವಾಗಿ ನಿವಾರಿಸುವಷ್ಟು ಶಕ್ತವಾಗಿಲ್ಲ. ಆಧ್ಯಾತ್ಮಿಕವಾಗಿ ನಾವು ಬಲಶಾಲಿಗಳಾಗಿ ಬೆಳೆಯುತ್ತಲೇ ಹೋಗಬೇಕು. ನಮ್ಮ ಭೂಮಿಯ ಸಮಸ್ಯೆಗಳನ್ನು ಪರಿಹರಿಸಲು ಮೇಲಿನಿಂದ ಯಾರೂ ಬರುವುದಿಲ್ಲ. ನಮ್ಮ ಮಾಸ್ಟರ್‌ಗಳು ಸೂಕ್ಷ್ಮ ಮಟ್ಟದಲ್ಲಿ ಬಹಳ ಕೆಲಸವನ್ನು ಮಾಡುತ್ತಿರಲೇ ಬೇಕು, ಅದರ ಅರಿವು ನಮಗಿಲ್ಲ. ಆದರೆ, ಈ ಭೂಮಿಯ ಮೇಲಿನ ಜನರೇ ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸಬೇಕು. ಪ್ರೀತಿಯ ಮತ್ತು ಒಳ್ಳೆಯತನದ ತರಂಗಗಳನ್ನು ಬಲಪಡಿಸುವ ಗಂಭೀರ ಪ್ರಯತ್ನವನ್ನು ಮಾನವರು ಮಾಡಿದಾಗ, ವಿಶ್ವವು ಅವರಿಗೆ ಸಹಾಯಮಾಡುತ್ತದೆ. ಆದರೆ ತುಂಬಾ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಬೇಕು.

ಆದರೆ ಸಾಮಾನ್ಯ ಮನುಷ್ಯರಾದ ನಾವು, ಏನನ್ನಾದರೂ ನೇರವಾಗಿ ಮಾಡಲು ತುಂಬ ಸಣ್ಣವರು ಮತ್ತು ಅಶಕ್ತರು. ಆದರೆ ನಾವು ಹೆಚ್ಚು ಧ್ಯಾನ ಮಾಡಬಹುದು, ನಮ್ಮ ತರಂಗಗಳ ಗುಣಮಟ್ಟವನ್ನು ಉತ್ತಮಗೊಳಿಸಿಕೊಳ್ಳಬಹುದು, ಹೆಚ್ಚು ಬೆಳಕನ್ನು ಚಾನಲ್ ಮಾಡಬಹುದು. ನಾವು ಈ ಜನರಿಗಾಗಿ ಭಾವನಾತ್ಮಕವಾಗಿ ಮೌನದಲ್ಲಿ ಸ್ಪಂದಿಸಬಹುದು. ಈ ಭೂಮಿಯ ಬಹುತೇಕ ಜನರಲ್ಲಿ ಈ ರೀತಿಯ ಕಾಳಜಿಯಿದ್ದರೆ, ಅವರು ಮೌನವಾಗಿ ಪ್ರಾರ್ಥಿಸಿದರೆ, ಅವರ ಆಶಯದ ತರಂಗಗಳು ಕೆಲಸಮಾಡುತ್ತವೆ. ಅಂಧಕಾರವನ್ನು ಅದು ಈ ಭೂಮಿಯಿಂದ ತೊಡೆದುಹಾಕುತ್ತದೆ. ನಾವು ತೊಡಗಿಕೊಳ್ಳಬೇಕಾಗಿರುವುದು ಈ ಪ್ರಕ್ರಿಯೆಯಲ್ಲಿಯೇ.

24-08-2014

ವ್ಯಕ್ತಿಯೊಬ್ಬರು, ತಮಗೆ ಅನೇಕ ವರ್ಷಗಳಿಂದ ಅನಾರೋಗ್ಯದ ಸಮಸ್ಯೆಯಿದೆಯೆಂದು ಇತ್ತೀಚೆಗೆ ನಮಗೆ ತಿಳಿಸಿದರು. ವೈರಾಗ್ಯದ ಭಾವದಿಂದ ಆ ಸ್ಥಿತಿಯನ್ನಾಗಲೇ ಬಹುಶಃ ತಾಳಿಕೊಳ್ಳಲು ಆಕೆ ಸಿದ್ಧಳಾಗಿದ್ದರು. ಒಮ್ಮೆ ಕಾರ್ಯಕ್ರಮವೊಂದರಲ್ಲಿ ಗುರೂಜಿಯವರು ಆಕೆಯನ್ನು ನೋಡಿದಾಗ, ಹತ್ತಿರ ಹೋಗಿ, 'ಕಣ್ಣೀರಿಗಾಗಿ ನೀವು ಹುಡುಕಾಡಿದರೂ ಅದು ನಿಮಗೆ ಸಿಗದಂತಹ ದಿನ ಬರುತ್ತದೆಂದು ನಾನು ಹೇಳಿದರೆ ನೀವು ನಂಬುವುದಿಲ್ಲ!' ಎಂದು ಹೇಳಿದರು. 'ನಾನೀಗ ಅಂತಹ ಸ್ಥಿತಿಯಲ್ಲಿದ್ದೇನೆ. ನನ್ನೆಲ್ಲ ಅನಾರೋಗ್ಯದ ಸಮಸ್ಯೆಗಳು ಪರಿಹಾರವಾಗಿರುವುದರಿಂದ ನಾನೀಗ ಬಹಳ ಸಂತೋಷದಿಂದಿದ್ದೇನೆ' ಎಂದು ಇತ್ತೀಚೆಗೆ ಆಕೆ ನಮಗೆ ಹೇಳಿದರು. ಸಹಜವಾಗಿಯೇ ಆಕೆಗೆ ಗುರೂಜಿಯವರ ಮೇಲೆ ಅಪಾರವಾದ ನಂಬಿಕೆ ಇತ್ತು. ಗುರೂಜಿಯವರ ಆ ಮಾತುಗಳು ಆಕೆಯಲ್ಲಿ ಆಶಾಭಾವವನ್ನು ತುಂಬಿರಬೇಕು ಮತ್ತು ಸುದೀರ್ಘ ಕಾಲದ ಕಾಯಿಲೆಯನ್ನು ಎದುರಿಸಲು ಆಕೆಗೆ ಅಗಾಧ ಶಕ್ತಿಯನ್ನು ನೀಡಿರಬೇಕು. ಸುಮಾರು 18-19 ವರ್ಷಗಳ ಹಿಂದೆ ಗುರೂಜಿಯವರು ನಮ್ಮಲ್ಲಿ ಕೆಲವರೊಂದಿಗೆ ಮಾತನಾಡುತ್ತಿದ್ದರು. ಆಗ 'ಮುಂದೊಂದು ದಿನ ನಿಮ್ಮಲ್ಲಿ ಪ್ರತಿಯೊಬ್ಬರೂ ಕಾರನ್ನು ಹೊಂದುತ್ತೀರಿ ಎಂದು ನಾನು ಹೇಳಿದರೆ ನೀವು ಅದನ್ನು ನಂಬುವುದಿಲ್ಲ' ಎಂದು ಅವರು ಹೇಳಿದರು. ಆ ಕಾಲದಲ್ಲಿ ನಮ್ಮಲ್ಲಿ ಕೆಲವರಲ್ಲಿ ಮಾತ್ರವೇ ವಾಹನಗಳಿದ್ದವು. ಆ ದಿನ ಅಲ್ಲಿದ್ದ ನಮ್ಮೆಲ್ಲರ ಬಳಿಯೂ ಈಗ ಕಾರುಗಳಿವೆ!

ಅದೇ ರೀತಿ, 12 ವರ್ಷವೂ ತುಂಬಿರದಿದ್ದ ಅಮರರವರು, 1947ರಲ್ಲಿ ಭಾರತವು ಸ್ವಾತಂತ್ರ್ಯವನ್ನು ಪಡೆಯುತ್ತದೆ ಎಂದು ಹೇಳಿದ್ದರು. ಸಹಜವಾಗಿಯೇ ಯಾರೂ ಅದನ್ನು ನಂಬಲಿಲ್ಲ! ಅದೇ ರೀತಿ, ಬೆಂಗಳೂರಿನ ಉತ್ತರ ಭಾಗದ ಹೊರ ಅಂಚಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೊಂದು ತಲೆಯೆತ್ತುತ್ತದೆಂದು ಅಮರರವರು ಹೇಳಿದ್ದರು. ಈ ಯೋಜನೆಯನ್ನು ಕೆಡಿಸಲು ಅನೇಕರು ಪ್ರಯತ್ನಿಸುತ್ತಿದ್ದರೂ, ಅದನ್ನು ಬೇರೆಲ್ಲಿಗಾದರೂ ಬದಲಾಯಿಸಲು ಪ್ರಯತ್ನಿಸುತ್ತಿದ್ದರೂ, ಎಷ್ಟೊಂದು ಸುಂದರವಾದ ವಿಮಾನ ನಿಲ್ದಾಣ ಬೆಂಗಳೂರಿನ ಉತ್ತರ ಭಾಗದ ಹೊರ ಅಂಚಿನಲ್ಲಿ ನಿರ್ಮಾಣವಾಗಿದೆ!

ಗುರೂಜಿ ಮತ್ತು ಅಮರರವರಂಥ ಮಾಸ್ಟರ್‌ಗಳಿಗೆ ಮುಂದಾಗುವುದು ತಿಳಿದಿತ್ತು. ಅದು ಒಂದು ಭಾಗ. ಮತ್ತೊಂದು ಭಾಗವೆಂದರೆ, ಅವರುಗಳು ದೇವರೊಂದಿಗೆ ಸಂಪೂರ್ಣವಾಗಿ ಶ್ರುತಿಗೊಂಡಿದ್ದರಿಂದ ಅವರು ಹೇಳಿದ್ದೆಲ್ಲವೂ ಸತ್ಯವಾಗುತ್ತಿತ್ತು. ಅಂತಹ ಮಾಸ್ಟರ್‌ಗಳು ಬಯಸಿದಾಗ, ಅವರ ಬಯಕೆಯು ಈ ಮಟ್ಟದಲ್ಲಿ ಅಭಿವ್ಯಕ್ತಿಗೊಂಡು ಸಾಕಾರ ರೂಪ ಪಡೆಯುತ್ತದೆ. ನಿಸ್ಸಂದೇಹವಾಗಿ ಅವರು ಯಾವಾಗಲೂ ಇತರರ ಬಗ್ಗೆಯೇ ಯೋಚಿಸುತ್ತಾರೆ. ಅವರು ಭೂಮಿಯ ಮೇಲೆ ಸತ್ಯಯುಗವನ್ನು ಬಯಸಿ ಅದರ ಕನಸು ಕಂಡರು, ನಾವೀಗ ನಿಜವಾಗಿಯೂ ಸತ್ಯಯುಗದ ಕಡೆಗೆ ಚಲಿಸುತ್ತಿದ್ದೇವೆ. ಅವರ ಕನಸುಗಳು, ಅವರ ಪರಿಶುದ್ಧ ಬಯಕೆಗಳು ತರಂಗಗಳನ್ನುಂಟುಮಾಡುತ್ತವೆ ಮತ್ತು ಅವರ ಕನಸುಗಳಲ್ಲಿ ಭಾಗಿಗಳಾಗಲು ಇತರರನ್ನು ಉತ್ತೇಜಿಸುತ್ತವೆ. ಇಂತಹ ಶುದ್ಧ ಬಯಕೆಗಳೊಂದಿಗೆ ಹೆಚ್ಚು ಹೆಚ್ಚು ಜನರು ಒಟ್ಟುಗೂಡಿದಾಗ, ಈ ತರಂಗಗಳು ಬಲಗೊಳ್ಳುತ್ತವೆ, ನಂತರ ಆ ಬಯಕೆಗಳು ಇಲ್ಲಿನ ಜೀವನದಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಮುಂದೊಂದು ದಿನ ಉತ್ತಮ ಪ್ರಪಂಚವನ್ನು ಪಡೆಯುತ್ತೇವೆ. ಅದರ ಬಗ್ಗೆ ಅನುಮಾನವೇ ಇಲ್ಲ. ಮಹಾನ್ ಮಾಸ್ಟರ್‌ಗಳು ಪ್ರಾಸಂಗಿಕವಾಗಿ ಹೇಳಿದ ಮಾತುಗಳೂ ಸತ್ಯವಾಗಿವೆ. ಹೊಸ ಯುಗವು ಅವರ ಕನಸು. ಅದು ಸದ್ಯದಲ್ಲಿಯೇ ನಿಜವಾದ ಸಂಗತಿಯಾಗುತ್ತದೆ.

ನಾನೊಂದು ವಸ್ತುವನ್ನು ಕೊಳ್ಳಬೇಕಿತ್ತು, ಅದಕ್ಕೆ ಹಲವಾರು ಆಯ್ಕೆಗಳಿದ್ದವು. ನಮ್ಮ ಸ್ನೇಹಿತರೂ ಆಗಿರುವ ಅಂಗಡಿಯೊಂದರ ಮಾಲೀಕರನ್ನು ಇದರ ಬಗ್ಗೆ ಕೇಳಿದೆ. ಅವರು ತಮ್ಮ ಪ್ರಾಮಾಣಿಕ ಅಭಿಪ್ರಾಯವನ್ನು ಕೊಟ್ಟು ಒಂದು ಮಾದರಿಯನ್ನು ಆಯ್ಕೆ ಮಾಡಿದರು. ಅದು ತಮ್ಮ ಬಳಿ ಇಲ್ಲವೆಂದೂ ಅದನ್ನು ಆನ್‌ಲೈನ್‌ನಲ್ಲಿ ಖರೀದಿಸಿರೆಂದೂ ನನಗೆ ಸಲಹೆ ನೀಡಿದರು. ಅವರ ಪ್ರಾಮಾಣಿಕತೆ ನನ್ನ ಮನಮುಟ್ಟಿತು. ಅವರ ಪ್ರಾಮಾಣಿಕತೆಯಿಂದಾಗಿ ಅವರು ತಮ್ಮ ವ್ಯಾಪಾರವನ್ನು ಕಳೆದುಕೊಂಡರು. ಅವಶ್ಯವಾಗಿ, ಅವರಿಗೆ ಇನ್ನೂ ಹೆಚ್ಚಿನದನ್ನು ದೇವರು ಕೊಡುತ್ತಾನೆ. ಅದರ ಬಗ್ಗೆ ನನಗೆ ಸಂಪೂರ್ಣ ನಂಬಿಕೆಯಿದೆ. ಈ ವ್ಯಕ್ತಿ ವ್ಯಾಪಾರಕ್ಕಿಂತ ನಮ್ಮ ಸಂಬಂಧಕ್ಕೆ ಹೆಚ್ಚು ಬೆಲೆ ಕೊಟ್ಟರು. ಅದು ನಿಜವಾಗಿಯೂ ಆಶ್ಚರ್ಯವುಂಟುಮಾಡುತ್ತದೆ! ಸುತ್ತಲೂ ಹೆಚ್ಚು ಕತ್ತಲನ್ನು ನಾವು ಕಾಣುತ್ತಿದ್ದರೂ, ಇಂತಹ ಪ್ರಾಮಾಣಿಕ ವ್ಯಕ್ತಿಗಳಲ್ಲಿ ಬೆಳಕು ಪ್ರಕಾಶಿಸುತ್ತಿದೆ. ಇದೂ ಕೂಡ ವಾಸ್ತವವೇ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು –ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ 14% ಸೇವಾ ತೆರಿಗೆ, ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ 14% ಸೇವಾ ತೆರಿಗೆ ಮತ್ತು ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ರಾಘವೇಂದ್ರ ಸೋಮಯಾಜಿಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

'ಸಾಧನೆಯೆಂದರೆ ಏನು?' ಎಂಬ ಪ್ರಶ್ನೆಗೆ, "ಸಾಧನೆಯೆಂದರೆ ದೈವಕ್ಕೆ ನಮ್ಮ ಮೂಲಕ ಕೆಲಸವಾಡಲು ಅವಕಾಶವಮಾಡಿಕೊಡುವುದೇ ಹೊರತು ಸುಮ್ಮನೆ ಏನನ್ನೋ ಮಾಡುವುದಲ್ಲ" ಎಂದು ಗುರೂಜಿಯವರು ಒಮ್ಮೆ ಹೇಳಿದ್ದರು. ಇದೊಂದು ಸ್ವಾರಸ್ಯಕರ ವಿರೋಧಾಭಾಸ. ಒಂದು ಕಡೆಯಿಂದ ನೋಡಿದರೆ ಸಾಧನೆಯೆಂದರೆ ಪ್ರಯತ್ನ, ಇನ್ನೊಂದು ಕಡೆಯಿಂದ ನೋಡಿದರೆ ಸಾಧನೆಯೆಂದರೆ ಏನನ್ನೂ ಮಾಡದಿರುವುದು, ಪ್ರಯತ್ನಪಡದಿರುವುದು. ಅದು ಶರಣಾಗುವುದಷ್ಟೆ. ಶರಣಾಗುವುದು ಒಂದು ಚಟುವಟಿಕೆಯಲ್ಲ. ಅದು ನಾವಿರುವ ಒಂದು ಸ್ಥಿತಿ. ಧ್ಯಾನಮಾಡುವಾಗ ನಾವು ಎದುರಿಸುವ ಒಂದು ಮುಖ್ಯ ಅಡಚಣೆಯೆಂದರೆ, ಪ್ರವಾಹದೋಪಾದಿಯಲ್ಲಿ ನಿಲ್ಲದೆ ಬರುವ ಆಲೋಚನೆಗಳು. ಅದು ಮನಸ್ಸನ್ನು ಅಲೆದಾಡುವಂತೆ ಮಾಡುತ್ತದೆ. ಧ್ಯಾನದ ಸಮಯದಲ್ಲಿ ಏನನ್ನೂ ಮಾಡಲು ಪ್ರಯತ್ನಿಸದಿರುವುದೇ ಅದಕ್ಕೆ ಪರಿಹಾರ. ಆಲೋಚನೆಗಳಿಗೆ ಗಮನ ಕೊಡಬಾರದು, ನಂತರ ಕಾಯಬೇಕು. ಆಲೋಚನೆಗಳ ಬಗ್ಗೆ ಅನಾಸಕ್ತಿ ತಳೆಯುವುದು ಉತ್ತಮ.

'ಧ್ಯಾನ' ಪದದಲ್ಲಿ ಎರಡು ಭಾಗವಿದೆಯೆಂದು ಗುರೂಜಿಯವರು ಹೇಳಿದ್ದರು. ಮೊದಲನೆಯ ಭಾಗವಾದ 'ಧ್ಯಾ', ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಪ್ರತಿನಿಧಿಸುತ್ತದೆ. ಎರಡನೆಯ ಭಾಗವಾದ 'ನ' ಎಂದರೆ 'ಇಲ್ಲ'. ಆದ್ದರಿಂದ 'ಧ್ಯಾನ' ಎಂದರೆ ದೇಹ, ಮನಸ್ಸು ಮತ್ತು ಬುದ್ಧಿಗಳ ಅರಿವಿಲ್ಲದಿರುವುದು ಅಥವ ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಮೀರಿದ ಅರಿವು. ಆದ್ದರಿಂದ ಧ್ಯಾನ ಸಮಾಧಿಗೆ ಕೊಂಡೊಯ್ಯುತ್ತದೆ. ಮನೋಮಯ ಕೋಶವು ಈ ಪ್ರಪಂಚವನ್ನು ಗ್ರಹಿಸಲು ಬೇಕಾಗುವ ಒಂದು ಉಪಕರಣ. ಆಲೋಚನೆಗಳು ಇಲ್ಲದಿದ್ದಾಗ, ಮನೋಮಯ ಕೋಶವು ಇರುತ್ತದೆಯಾದರೂ ಮನಸ್ಸು ಇರುವುದಿಲ್ಲ. ಇದನ್ನೆ 'ಮನೋನಾಶ' ಎನ್ನುವುದು. ಇದೊಂದು 'ಮನಸ್ಸು ಇಲ್ಲ'ದ ಸ್ಥಿತಿ. ಧ್ಯಾನದಲ್ಲಿ ಆಗಬೇಕಾಗಿರುವುದು ಇದೇ. ಮನಸ್ಸು ಮತ್ತು ಬುದ್ಧಿಗಳು ಇಲ್ಲದಿರುವ ನಮ್ಮನ್ನು ಅನುಭವಿಸುವುದೇ ಸಮಾಧಿ.

ನಮ್ಮ ಧ್ಯಾನ ಮತ್ತು ನಮ್ಮ ಜೀವನಗಳೆರಡೂ ಒಂದನ್ನೊಂದು ಅವಲಂಬಿಸಿವೆ. ಸಮಾಧಾನದ ಮತ್ತು ಶಾಂತಿಯ ಜೀವನವನ್ನು ಸಾಗಿಸಲು ನಮಗೆ ಸಾಧ್ಯವಾದರೆ, ಅಂದರೆ ಮಾನಸಿಕ ಚಟುವಟಿಕೆ ಕಡಿಮೆಯಾದರೆ, ಧ್ಯಾನದ ಸಮಯದಲ್ಲಿ ಸುಲಭವಾಗಿ ನಾವು ನಿಶ್ಚಲತೆಯನ್ನು ಅನುಭವಿಸಬಹುದು. ಅದರಂತೆಯೇ, ಧ್ಯಾನದ ಸಮಯದಲ್ಲಿ ನಿಶ್ಚಲತೆಯನ್ನು ಅನುಭವಿಸಲು ನಮಗೆ ಸಾಧ್ಯವಾದರೆ, ನಾವು ಸಮಾಧಾನದ ಜೀವನ ನಡೆಸಬಹುದು. ದಿನಪೂರ್ತಿ ನಿಶ್ಚಲತೆಯನ್ನು ಕಾಪಾಡಿಕೊಳ್ಳುವುದು ಬಹುಮುಖ್ಯ, ಅದಕ್ಕೆ ಪ್ರಜ್ಞಾಪೂರ್ವಕ ಪ್ರಯತ್ನ ಬೇಕು. ನಾವು ಆತ್ಮ, ದೇವರ ಕಿಡಿಗಳು. ಆದರೆ ನಮ್ಮ ಪ್ರಜ್ಞೆಯು ಹೆಚ್ಚಾಗಿ ನಮ್ಮ ದೇಹ, ಮನಸ್ಸು ಮತ್ತು ಬುದ್ಧಿಗಳಲ್ಲಿ ಸಿಲುಕಿಕೊಂಡಿರುತ್ತದೆ. ನಮ್ಮ ವ್ಯಕ್ತಿತ್ವದ ಮೇಲ್ಮೈ ಮಟ್ಟದಲ್ಲಿ ಸಿಕ್ಕಿಹಾಕಿಕೊಂಡಿರುವ ಈ ಪ್ರಜ್ಞೆಯನ್ನು ನಾವು ಬಿಡಿಸಬೇಕು, ಆಗ ಅದು ಅದರ ಮೂಲಕ್ಕೆ ಹಿಂದಿರುಗುತ್ತದೆ. ಇದು ಮನೆಗೆ ಹಿಂದಿರುಗಿದಂತೆ.

ನಾವು ಅರ್ಥಮಾಡಿಕೊಂಡಿರುವ 'ಬೆಳಕು' ಪದದ ಅರ್ಥವೇ ನಾವು ಬೆಳಕನ್ನು ಅನುಭವಿಸುವುದಕ್ಕೆ ಒಂದು ಮುಖ್ಯವಾದ ಅಡಚಣೆಯಾಗಿದೆ. ಬೆಳಕನ್ನು, ಕಣ್ಣಿಗೆ ಕಾಣುವ ಬೆಳಕೆಂದು ಊಹಿಸಿಕೊಂಡು, ಅದನ್ನು ಅನುಭವಿಸಲು ಪ್ರಯತ್ನಿಸಿದರೆ ಅದರಿಂದ ಏನೂ ಪ್ರಯೋಜನವಿಲ್ಲ. 'ಬೆಳಕನ್ನು ನೋಡುವ ಪ್ರಯತ್ನ ಮಾಡಬೇಡಿ' ಎಂದು ಗುರೂಜಿಯವರು ಸೂಚಿಸುತ್ತಿದ್ದುದು ಈ ಕಾರಣದಿಂದಲೇ ಇರಬಹುದೆಂದು ನನಗನ್ನಿಸುತ್ತದೆ. ಈ ಸೂಚನೆ ಬಹು ಮುಖ್ಯ.

ಕೆಲವು ಸಾಧಕರು ಲೈಟ್ ಚಾನಲಿಂಗ್ ತಂತ್ರವನ್ನು ತುಂಬ ಗಂಭೀರವಾಗಿ ಪರಿಗಣಿಸಿ ಬಹಳ ಪ್ರಯತ್ನದಿಂದ ಅಭ್ಯಾಸ ಮಾಡಿದಾಗ, ಬೆಳಕಿಗೆ ಪ್ರವೇಶ ಮಾಡುವುದಕ್ಕೇ ಅವಕಾಶವಾಗದಿರುವುದನ್ನು ನಾನು ಗಮನಿಸಿದ್ದೇನೆ. ಎಲ್ಲಿಯವರೆಗೆ ಮನಸ್ಸು ಮತ್ತು ಬುದ್ಧಿಗಳ ಮಟ್ಟದಲ್ಲಿ ನಾವು ಕ್ರಿಯಾಶೀಲರಾಗಿರುತ್ತೇವೆಯೋ ಅಲ್ಲಿಯವರೆಗೆ ಬೆಳಕನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ.

ಧ್ಯಾನ ಮಾಡುವಾಗ ಋಷಿಗಳನ್ನು ಸಂಪರ್ಕಿಸುವುದು ಇತ್ಯಾದಿಯಾದ ಬೇರೆ ಯಾವುದನ್ನೇ ಪ್ರಯತ್ನಿಸಿದರೂ, ಅದು ಬೆಳಕನ್ನು ಅನುಭವಿಸುವುದರಿಂದ ನಮ್ಮನ್ನು ವಂಚಿತ–ರನ್ನಾಗಿಸುತ್ತದೆ.

ಜೀವನದಲ್ಲಿ ಶರಣಾಗುವುದಕ್ಕೆ ಮೊದಲು, ಧ್ಯಾನದ ಸಮಯದಲ್ಲಿ ಶರಣಾಗುವುದರಲ್ಲಿ ನಾವು ಸಫಲರಾಗಬೇಕು. ಅದು ಗುರುವಿನ ಕೃಪೆಯಿಂದ ಮಾತ್ರವೇ ಸಾಧ್ಯ. ಗುರುವಿನ ಕೃಪೆ ಯಾವಾಗಲೂ ಇರುತ್ತದೆ, ಆದರೆ ನಾವು ನಿಯಂತ್ರಿಸುವ ಪ್ರಯತ್ನವನ್ನು ನಿಲ್ಲಿಸಿದಾಗ ಮಾತ್ರ ಅವರ ಕೃಪೆಯನ್ನು ಪಡೆಯಬಹುದು. ನಮ್ಮ ಜೀವನವನ್ನು ಗುರುವಿನ ಅಧೀನಕ್ಕೆ ಒಪ್ಪಿಸಿದಾಗ ಅತ್ಯುನ್ನತವಾದುದನ್ನು ನಾವು ಅನುಭವಿಸುತ್ತೇವೆ.

ನಾನು ಅರ್ಥಮಾಡಿಕೊಂಡಿರುವಂತೆ, ಬೆಳಕನ್ನು ಅನುಭವಿಸುವುದಕ್ಕೆ ಮೊದಲ ಮೆಟ್ಟಿಲೆಂದರೆ ನಿಶ್ಚಲತೆಯನ್ನು ಅನುಭವಿಸುವುದು. ಬೆಳಕನ್ನು ಅನುಭವಿಸುವುದೆಂದರೆ, ಬೆಳಕನ್ನು ನೋಡುವುದು ಇರಬಹುದು ಅಥವ ಇಲ್ಲದಿರಬಹುದು. ಸಂಪೂರ್ಣ ತೃಪ್ತಿಯೊಂದಿಗೆ ಆಳವಾದ ನಿಶ್ಚಲತೆಯನ್ನು ನಾವು ಅನುಭವಿಸಿದರೆ, ಅಂದರೆ ನಮ್ಮಲ್ಲಿ ಸಂಪೂರ್ಣವಾಗಿ ಬಯಕೆಗಳು ಅಥವ ಅವಶ್ಯಕತೆಗಳು ಇಲ್ಲವಾದಾಗ, ನನ್ನ ಅಭಿಪ್ರಾಯದಲ್ಲಿ, ಅದು ನಾವು ಬೆಳಕನ್ನು ಅನುಭವಿಸಿರುವುದನ್ನು ಸೂಚಿಸುತ್ತದೆ. ಬೆಳಕನ್ನು ಅನುಭವಿಸಬೇಕಾದರೆ ನಮ್ಮ ಕಂಪನವನ್ನು ಬೆಳಕಿನ ಕಂಪನದ ಮಟ್ಟಕ್ಕೆ ಏರಿಸಿಕೊಳ್ಳಬೇಕು. ಇದಕ್ಕೆ, ನಾವು ಎಲ್ಲ ಮಟ್ಟಗಳಲ್ಲೂ ಪರಿವರ್ತನೆಗೊಳ್ಳಬೇಕು. ಬೇರೆ ದಾರಿಯಿಲ್ಲ. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ.ರಾವ್; ಅನು: ಪಾಂಡುರಂಗ

**ಪ್ರ: ಗುರೂಜಿ, ನಿಮಗೆ ಯಾವುದರಿಂದ ಸಂತೋಷವಾಗುತ್ತದೆ?**

ಉ: ಈ ಬಗ್ಗೆ ನಾನು ಬಹಳಷ್ಟು ವಿಷಯಗಳನ್ನು ಪಟ್ಟಿಮಾಡಬಹುದು. ನೀವು ಧ್ಯಾನ ಮಾಡಿದರೆ ನನಗೆ ಸಂತೋಷವಾಗುತ್ತದೆ. ನಾನು ತಿಳಿಸುತ್ತಿರುವುದನ್ನು ಬೇರೆಯವರು ಅರ್ಥಮಾಡಿಕೊಂಡಿದ್ದಾರೆ ಎಂದು ನನಗೆ ಅರಿವಾದರೆ, ನನಗೆ ನಿಜವಾಗಿಯೂ ಸಂತೋಷವಾಗುತ್ತದೆ. ಯಾರಿಗಾದರೂ ಪ್ರಾಮಾಣಿಕ ಅನುಭವವಾದಾಗ ನನಗೆ ಸಂತೋಷವಾಗುತ್ತದೆ. ನೀವು ಒಂದು ಉತ್ತಮವಾದ ಪ್ರಶ್ನೆ ಕೇಳಿದರೆ ನನಗೆ ಸಂತೋಷವಾಗುತ್ತದೆ. ನಾನು ಒಂದು ನಿರ್ಜೀವ ವಸ್ತುವಿನೊಂದಿಗೆ ಸಂಪರ್ಕ ಪಡೆದಾಗ ನನಗೆ ತುಂಬ ಸಂತೋಷವಾಗುತ್ತದೆ. ಬೆಳಕಿನ ಸಾಗರದಲ್ಲಿ ವಿಸ್ತಾರಗೊಂಡಾಗ, ನಿಮ್ಮೆಲ್ಲರಂತೆಯೇ ನಾನೂ ಸಂತೋಷಪಡುತ್ತೇನೆ. ನನ್ನ ಗುರುವನ್ನು ಜ್ಞಾಪಿಸಿಕೊಂಡಾಗ ನನಗೆ ಅತ್ಯಂತ ಸಂತೋಷವುಂಟಾಗುತ್ತದೆ. ಕೆಲವೊಮ್ಮೆ 'ಮಾಸ್ಟರ್ ವಿ' ಅವರಿಂದ ಒಂದು ರೀತಿಯ ಸೂಚನೆಯನ್ನು ಪಡೆಯುತ್ತೇನೆ, ಆಗ ನಾನು ಭಾವಪರವಶನಾಗುವುದರ ಜೊತೆಗೆ ಸಹಜವಾಗಿಯೇ ಬಹಳ ಸಂತೋಷವಾಗುತ್ತದೆ. ಹಿಂದಿನ ಜನ್ಮದ ಯಾವುದೇ ಆತ್ಮವನ್ನು ಭೇಟಿಯಾದಾಗಲೆಲ್ಲ ನಾನು ಸಂತೋಷ-ಗೊಳ್ಳುತ್ತೇನೆ. ಸರಳ, ಒಳ್ಳೆಯ ಮತ್ತು ಪ್ರಾಮಾಣಿಕ ಜನರೊಂದಿಗೆ ಮಾತನಾಡಿದಾಗ ನನಗೆ ಸಂತೋಷವಾಗುತ್ತದೆ. ಲೈಟ್ ಚಾನಲಿಂಗ್ ಮಾಡುತ್ತಿರುವ ಮಕ್ಕಳ ಬಗ್ಗೆ ಯೋಚಿಸಿದಾಗ ನನಗೆ ಅತ್ಯಂತ ಸಂತೋಷವಾಗುತ್ತದೆ. ಧ್ಯಾನವನ್ನು ಹೇಳಿಕೊಡುವ ಮತ್ತು ಧ್ಯಾನದಲ್ಲಿ ತರಬೇತಿ ನೀಡುವ, ನನ್ನ ಗುರುವಿನ ಈ ಯೋಜನೆಯನ್ನು ಮುಂದುವರಿಸುತ್ತಿರುವುದರಿಂದ ನನಗೆ ಸಂತೋಷವಾಗಿದೆ.

**ಪ್ರ: ಯಾವುದರಿಂದ ನೀವು ದು:ಖಿತರಾಗುತ್ತೀರಿ?**

ಉ: ಬೆಳಿಗ್ಗೆ ದಿನಪತ್ರಿಕೆಗಳಲ್ಲಿ – ಕೊಲೆಗಳು, ಅತ್ಯಾಚಾರಗಳು, ಹಗರಣಗಳು ಮುಂತಾದ ಅಹಿತಕರ ಸುದ್ದಿಗಳನ್ನು ನೋಡಿದಾಗ ನನಗೆ ದು:ಖವಾಗುತ್ತದೆ. ಜನರು ಋಷಿಗಳಿಂದ ದೂರ ಹೋದಾಗ ನಾನು ಅತ್ಯಂತ ದು:ಖಿತನಾಗುತ್ತೇನೆ. ಕೆಲವೊಮ್ಮೆ ಜನರು ಅಪ್ರಜ್ಞಾಪೂರ್ವಕವಾಗಿ ದೂರವಾಗುತ್ತಾರೆ, ಆದರೆ ಅವರಿಗೆ ಅದರ ಅರಿವಾದಾಗ ಹಿಂತಿರುಗಿ ಬರುತ್ತಾರೆ. ಇಂಥದ್ದನ್ನು ಗಮನಿಸಿದಾಗ ನನಗೆ ಸಂತೋಷವಾಗುತ್ತದೆ, ಆದರೆ ನಾನು ಇವುಗಳನ್ನೆಲ್ಲಾ ಸಹಜವೆಂಬಂತೆ ಗಮನಿಸುತ್ತಿದ್ದೇನೆ. ಏನೇ ಆದರೂ ದುಃಖಿತನನ್ನಾಗಿ ಮಾಡುವ ಅನೇಕ ವಿಷಯಗಳಿವೆ.

**ಪ್ರ: ದೇವರ ಸ್ವರೂಪದ ಬಗ್ಗೆ ಜೀಸಸ್ ಕ್ರೈಸ್ಟ್‌ರಿಗೆ ತಮ್ಮ ಸಮಯದಲ್ಲಿ ಇದ್ದ ವಿಷನ್ ಏನು, ಆಕಾರವೋ ಅಥವಾ ನಿರಾಕಾರವೋ?**

ಉ: ಈ ಸೃಷ್ಟಿಯಲ್ಲಿ ಜೀಸಸ್ ಕ್ರೈಸ್ಟ್ ಅವರು ಮಹಾನ್ ಮಾಸ್ಟರ್‌ಗಳಲ್ಲಿ ಒಬ್ಬರು. ಅವರಿಗೆ ಯಾವಾಗಲೂ ನಿರಾಕಾರ ದೇವರೊಂದಿಗೆ ಸಂಪರ್ಕವಿತ್ತು. ಅವರು ಸಾಕಾರ ರೂಪದ ದೇವರನ್ನು ಭೇಟಿ ಮಾಡಿದ್ದರು. ಆದರೆ ಅವರು ಯಾವಾಗಲೂ ನಿರಾಕಾರ ದೇವರನ್ನು ಅನುಭವಿಸುತ್ತಿದ್ದರು. ಅವರು ಎಲ್ಲ ಸಮಯಗಳಲ್ಲೂ ದೇವರೊಂದಿಗೆ ಜೀವಿಸುತ್ತಿದ್ದರು.

**ಪ್ರ: ಜೀಸಸ್ ಕ್ರೈಸ್ಟ್ ಅವರು ತಮ್ಮ ಅನುಯಾಯಿಗಳಿಗೆ ಯಾವ ರೀತಿಯ ತಂತ್ರಗಳನ್ನು ಹೇಳಿಕೊಟ್ಟರು?**

ಉ: ಅವರು ಉದ್ದೇಶಪೂರ್ವಕವಾಗಿಯೇ ಸರಳ ತಂತ್ರಗಳನ್ನು ಹೇಳಿಕೊಟ್ಟರು, ಬಹುಶ: ಒಂದು ಮಂತ್ರವನ್ನು ಜಪಿಸುವುದು, ಮಂತ್ರವಲ್ಲದಿದ್ದರೆ ಕೆಲವು ಪದಗಳನ್ನು ಪುನರಾವರ್ತಿಸುವುದು; ಅನುಯಾಯಿಗಳು ಬೇರೆಯವರಿಗೆ ಆ ತಂತ್ರಗಳನ್ನು ಹೇಳಿಕೊಡಲು ಸುಲಭವಾಗಿದ್ದವು. ಆದರೆ ಈ ಎಲ್ಲ ತಂತ್ರಗಳಿಗಿಂತ ಹೆಚ್ಚಾಗಿ ಅವರು ಪ್ರೀತಿ ಎಂದರೇನು ಎಂಬುವುದನ್ನು ಹೇಳಿಕೊಟ್ಟರು. ಬಹುಶ: ಜೀಸಸ್ ಕ್ರೈಸ್ಟ್‌ರಂತೆ ಬೇರೆ ಯಾವುದೇ ಮಾಸ್ಟರ್ ಪ್ರೀತಿಯ ಬಗ್ಗೆ ಮಾತನಾಡಿಲ್ಲ ಮತ್ತು ಹೇಳಿಕೊಟ್ಟಿಲ್ಲ. ಜೊತೆಜೊತೆಗೆ ಅವರು ತಮ್ಮ ಅನುಯಾಯಿಗಳಿಗೆ ಸೂಕ್ಷ್ಮ ಮಟ್ಟದಲ್ಲಿ ಅನೇಕ ವಿಷಯಗಳನ್ನು ಹೇಳಿಕೊಟ್ಟರು ಮತ್ತು ಮುಂದೆ ಅವರು ಕಷ್ಟದ ಕೆಲಸಗಳನ್ನು ಮಾಡಬೇಕಾಗಿದ್ದರಿಂದ ಸೂಕ್ತ ತರಬೇತಿಯನ್ನು ಕೂಡಾ ನೀಡುತ್ತಿದ್ದರು.

**ಪ್ರ: ಸಂತೋಷಿ ದೇವಿ ಯಾವ ಲೋಕದಿಂದ ಬಂದಿದ್ದಾರೆ?**

ಉ: ತಪೋನಗರದಲ್ಲಿರುವ ಎಲ್ಲ ಹೀಲಿಂಗ್ ಚೈತನ್ಯಗಳ ಉಸ್ತುವಾರಿ ದೇವತೆ ಸಂತೋಷಿ ದೇವಿ. ಈ ದೇವಿ ಶಕ್ತಿ ಲೋಕದಿಂದ ಬಂದಿದ್ದಾರೆ.

**ಪ್ರ: ಕಲಿಯುಗದ ಪ್ರಾರಂಭದ ದಿನಗಳಲ್ಲಿ ದುಷ್ಟ ಶಕ್ತಿಗಳು ನಕಾರಾತ್ಮಕ ಚೈತನ್ಯಗಳನ್ನು ಈ ಗ್ರಹಕ್ಕೆ ಸೇರಿಸುತ್ತವೆಯೇ?**

ಉ: ಕಲಿಯುಗ ಆರಂಭವಾಗುವವರೆಗೂ ದುಷ್ಟ ಚೈತನ್ಯಗಳು ಸುಪ್ತವಾಗಿರುತ್ತವೆ. ಕಲಿಯುಗ ಆರಂಭಗೊಳ್ಳುತ್ತಿದ್ದಂತೆಯೇ ಈ ನಕಾರಾತ್ಮಕ ಚೈತನ್ಯಗಳು ಬಿಡುಗಡೆಯಾಗುತ್ತವೆ, ಸೇರಿಸುವುದಲ್ಲ, ಮತ್ತು ಎಲ್ಲೆಡೆಯಲ್ಲೂ ಈ ಚೈತನ್ಯಗಳು ಇರುತ್ತವೆ.

**ಪ್ರ: ಸತ್ಯಯುಗದಲ್ಲಿ ಬೆಳಕಿನ ಆವರ್ತನವು (frequency) ಅಧಿಕವಾಗಿರುತ್ತದೆಯೇ ?**

ಉ: ಸತ್ಯಯುಗದಲ್ಲಿ ನಾವು ಉನ್ನತ ಆವರ್ತನದ ಹೆಚ್ಚು ಬೆಳಕನ್ನು ಹೊಂದಿರುತ್ತೇವೆ.


**ಪ್ರ: ನಗುವು ಆತ್ಮದಿಂದ ಮೂಡಿ ಬರುವುದೇ?**

ಉ: ಹೌದು, ಆತ್ಮದಿಂದ ನಗು ಮೂಡಿ ಬರುತ್ತದೆ. ■


### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು-ಶಿಷ್ಯರ ಸಂಭಾಷಣೆ | 60/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगतील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु-शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. KRNA/BGE-1124/2014-2016
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಒಂದು ದಿನ ಮುಷ್ಟಿಯ ಗಾತ್ರದ ಆಕಾಶವನ್ನು ಅನುಭವಿಸುತ್ತಿದ್ದಾಗ, ಕೆಲವು ನಿಮಿಷಗಳ ಕಾಲ ನನಗೆ ಆಕಾಶ ಕಾಣಿಸಿತು ಮತ್ತು ನಂತರ ಒಂದು ಮುಷ್ಟಿಯಷ್ಟು ದೊಡ್ಡದಾದುದೇನೋ ಒಂದು ಗೋಚರಿಸಿ, ಇದ್ದಕ್ಕಿದ್ದಂತೆಯೇ ಅದರಿಂದ ಶುಭ್ರ ಬಿಳಿಯ ಬೆಳಕು ಹೊರಹೊಮ್ಮಲು ಆರಂಭಿಸಿತು. ಅದು ಅತ್ಯಂತ ಸುಂದರವಾಗಿತ್ತು. ನಾನು ಆಧ್ಯಾತ್ಮಿಕವಾಗಿ ಮೇಲೇರಿದಂತೆನಿಸಿ, ಆ ಅನುಭವದಿಂದ ಹೊರ ಬರುವುದೇ ಬೇಡವೆಂದೆನಿಸಿತು.

– ಸರೋಜ್ ಸಾವಲೆ

ಇತ್ತೀಚಿನ ಒಂದು ಭಾನುವಾರ ಬೆಳಗಿನ ಕನಸಿನಲ್ಲಿ ನಾನು ಗುರೂಜಿಯವರನ್ನು ಕಂಡೆ. ಕಳೆದ ಒಂದು ತಿಂಗಳಿನಿಂದ ನಾನು ಅಸಾಧ್ಯವಾದ ಹೊಟ್ಟೆನೋವಿನಿಂದ ಬಳಲುತ್ತಿದ್ದೆ. ಇದನ್ನು ಗುರೂಜಿಯವರಿಗೆ ತಿಳಿಸಿದಾಗ, ನನ್ನನ್ನು ಒಂದು ಸಣ್ಣ ಮಗುವಿನಂತೆ ಆಲಂಗಿಸಿದರು ಮತ್ತು ಮರುಕ್ಷಣ ನನ್ನ ಹೊಟ್ಟೆನೋವು ಮಾಯವಾಯಿತು! ನಾನು ಧ್ಯಾನವನ್ನು ಸರಿಯಾಗಿ ಮಾಡದಿದ್ದರೂ, ಗುರೂಜಿಯವರ ಸಹಾಯ ನನಗೆ ದೊರಕಿತು. ಅವರ ಪ್ರೀತಿ ಹಾಗೂ ಕಾಳಜಿಯ ಬಗ್ಗೆ ಹೇಳಲು ನನ್ನಲ್ಲಿ ಮಾತುಗಳೇ ಇಲ್ಲ. ಅವರ ಇರುವಿಕೆಯ ಅನುಭವ ಯಾವಾಗಲೂ ಇರುತ್ತದೆ.

– ಸುನಿತಾ ಕುಮಾರಿ

ಶಿವರಾತ್ರಿಯಂದು ತಪೋನಗರದಲ್ಲಿ ಧ್ಯಾನ ಮಾಡುತ್ತಿದ್ದಾಗ, ನಾನು ಕೈಲಾಸಕ್ಕೆ ಹೋಗಿ, ಅಲ್ಲಿ ಬೆಳಕಿನಿಂದ ಕೂಡಿದ್ದ ಶಿವನೊಂದಿಗೆ ಒಂದು ಶಿವಲಿಂಗವನ್ನು ಪ್ರವೇಶಿಸಿದೆ. ಅವನು ನನ್ನನ್ನು ಆ ಶಿವಲಿಂಗದೊಳಗೆಲ್ಲಾ ಕರೆದುಕೊಂಡು ಹೋದನು. ಆದರೆ ನನಗೆ ಅದರ ಆರಂಭ-ಅಂತ್ಯ ತಿಳಿಯಲಾಗಲಿಲ್ಲ. ನನಗೆ ತಲೆ ತಿರುಗಿದಂತಾಗಿ, ಶಿವನನ್ನು ನಿಲ್ಲಿಸುವಂತೆ ಬೇಡಿದೆ. ಅದೇ ಸಮಯದಲ್ಲಿ ಜಯಂತ್ ಸರ್‌ರವರು ಧ್ಯಾನ ಮುಗಿಸುವಂತೆ ತಿಳಿಸುತ್ತಿದ್ದರು. ಮಾರ್ಚ್ ತಿಂಗಳ 'ಪ್ರಕಾಶ್‌ಮಾರ್ಗ್'ನಲ್ಲಿ ಪ್ರಕಟವಾದ ಗುರೂಜಿಯವರ ಲೇಖನವನ್ನು ಓದಿದಾಗ, ಅದೊಂದು ನಿಜವಾದ ಅನುಭವವಾಗಿತ್ತು ಎಂದು ನನಗೆ ಅರ್ಥವಾಯಿತು.

– ಮೀರಾ ರಾಣೆ

ಜೂನ್ 30ರಂದು ನಾನು ಒಂದು ಮುಖ್ಯವಾದ ಕೆಲಸವನ್ನು ಮುಗಿಸಲೇಬೇಕಿತ್ತು. ಅಂದು ಬೆಳಿಗ್ಗೆ ನಾನು ಬೆಳಕನ್ನು ನನ್ನೊಡನಿದ್ದು ಸಹಾಯಮಾಡುವಂತೆ ಕೇಳಿಕೊಂಡೆ. ಆ ಕೆಲಸಕ್ಕೆ ಹೋಗುವಾಗ ದಾರಿಯಲ್ಲಿ ಒಂದು ಕ್ಷಣ ನನ್ನ ಇಡೀ ದೇಹ ಪುಳಕಗೊಂಡಿತು. ಆಗ ನಾನು ಸರಾಗವಾಗಿ ಸಾಗುತ್ತಿರುವಂತೆ ಅನಿಸಿ, ಒಂದು ಬಲವಾದ ಇರುವಿಕೆಯ ಅನುಭವವು ನಾನು ಏಕಾಂಗಿ ಅಲ್ಲ ಮತ್ತು ನನಗೆ ಸಹಾಯ ಮಾಡಲು ಒಂದು ಉನ್ನತ ಶಕ್ತಿಯಿದೆ ಎಂಬುದನ್ನು ಸೂಚಿಸಿತು. ನನ್ನ ಎಲ್ಲಾ ಕೆಲಸವೂ ಸುಸೂತ್ರವಾಗಿ ನನ್ನಿಷ್ಟದಂತೆಯೇ ನಡೆಯಿತು.

– ವರುಣ್ ಲೊಂಗಾನಿ

ಧ್ಯಾನಾಭ್ಯಾಸಕ್ಕಾಗಿ ಕುಳಿತು ಸಪ್ತರ್ಷಿ ಪ್ರಾಣಾಯಾಮ ಮಾಡಲಾರಂಭಿಸಿದ ಕ್ಷಣದಿಂದಲೇ ನನಗೆ ಬೆಳಕಿನ ಅನುಭವವಾಗುತ್ತದೆ. ನನ್ನ ಹಣೆಯಿಂದ ವಿಶೇಷವಾದ ಬೆಳಕಿನ ತರಂಗಗಳು ಹೊರಹೊಮ್ಮಿದಂತೆ ಮತ್ತು ವಿಸ್ತಾರಗೊಂಡಂತೆ ನನಗೆ ಅನಿಸುತ್ತದೆ. ಅದು ನನ್ನ ಧ್ಯಾನದ ಸಂಪೂರ್ಣ ಅವಧಿಯವರೆಗೆ ಮುಂದುವರೆಯುತ್ತದೆ. ನನ್ನೊಳಗಿನ ಆ ಬೆಳಕು ಹೆಚ್ಚುಹೆಚ್ಚು ಪ್ರಕಾಶಗೊಳ್ಳುತ್ತಾ ಹೋಗುತ್ತದೆ. ಅದು ಪಾರದರ್ಶಕವಾದ ಮತ್ತು ಕಾಂತಿಮಯ ಬೆಳಕು.

– ಸಂಜಯ್ ಮನೋಹರ್

ಬೆಳಕು ನಾನು ಸರಿಯಾದ ರೀತಿಯಲ್ಲಿ ವರ್ತಿಸುವುದಕ್ಕೆ ಸಹಾಯಮಾಡಿದೆ ಮತ್ತು ಅತ್ಯಂತ ಕ್ಲಿಷ್ಟಕರವಾಗಿದ್ದ ಹಣಕಾಸಿನ ಸಮಸ್ಯೆಯೊಂದನ್ನು ಪರಿಹರಿಸಿದೆ. ಅದು ನನಗೆ ಬಹು ದೊಡ್ಡ ನೆಮ್ಮದಿ ತಂದಿದೆ.

ನಿಮ್ಮ ಮಾರ್ಗದರ್ಶನಕ್ಕೆ ನನ್ನ ಕೃತಜ್ಞತೆಗಳು. ಗುರೂಜಿಯವರ ಪ್ರೀತಿ ಮತ್ತು ಅವರ ಬೆಳಕು ನನ್ನನ್ನು ಅನುಗ್ರಹಿಸಿದೆ. ನನ್ನ ಜೀವನದಲ್ಲಿ ಇನ್ನೂ ಅನೇಕ ಸಮಸ್ಯೆಗಳಿದ್ದು, ಅವೆಲ್ಲವೂ ಗುರೂಜಿಯವರು ಹೇಳಿದಂತೆ ಧ್ಯಾನದಿಂದ ನಿಧಾನವಾಗಿ ಕರಗಿ ಹೋಗುತ್ತವೆ ಎಂಬ ನಂಬಿಕೆಯಿದೆ.

– ಉತ್ಕರ್ಷ ಮಾಲ್‌ಕರ್

ಧ್ಯಾನ ಶುರುಮಾಡಿದ ನಂತರ, ಕೋಪ, ಕಿರಿಕಿರಿ ಮತ್ತು ಹತಾಶೆ ಕಡಿಮೆಯಾಗಿ, 'ಹೋಗಲಿ ಬಿಡು' ಎನ್ನುವ ಭಾವ ಮತ್ತು ನೈಜ ಸ್ವಾತಂತ್ರ್ಯ, ಶಾಂತಿಯ ಅನ್ವೇಷಣೆ, ನನ್ನ ಮನೆಗೆ ಹಿಂತಿರುಗುವ ಹಂಬಲ, ಹಾಗೂ ಪರಮಾತ್ಮನ ಪಾದಾರವಿಂದಗಳಲ್ಲಿ ಐಕ್ಯವಾಗಿ ಚಿರಶಾಂತಿಯನ್ನು ಹೊಂದುವ ಆಸೆ ಪ್ರಬಲವಾಗುತ್ತಿದೆ.

– ಮೀನಾ ರಾಣಾ

12-7-2015ರಂದು, ಭಾನುವಾರದ ತರಗತಿಯಲ್ಲಿ, ಒಂದು ತಿಂಗಳಿನಿಂದ ನನ್ನ ದಿನನಿತ್ಯದ ಜೀವನದಲ್ಲಿ ಕಾಡುತ್ತಿದ್ದ ನನ್ನೆಲ್ಲ ಪ್ರಶ್ನೆಗಳಿಗೆ ಹಾಗೂ ಸಮಸ್ಯೆಗಳಿಗೆ ಜಯಂತ್ ಸರ್‌ರವರ ಮಾತುಗಳಿಂದ ಹಾಗೂ ಗುರೂಜಿಯವರ ವೀಡಿಯೋದಿಂದ ಪರಿಹಾರ ದೊರಕಿತು. ಅದು, ವಿದ್ಯಾರ್ಥಿಯು ಪ್ರಶ್ನೆಯನ್ನು ಕೇಳದೆಯೇ ತನ್ನ ಸಮಸ್ಯೆಗೆ ಪರಿಹಾರ ಪಡೆಯುವ ಒಂದು ಆಧ್ಯಾತ್ಮಿಕ ತರಗತಿಯಂತಿತ್ತು. ಒಂದು ವಿವೇಕಯುಕ್ತ ಜೀವನ ನಡೆಸಲು ಇಲ್ಲಿ ಸಿಗುವ ಮಾರ್ಗದರ್ಶನ ಹಾಗೂ ತಿಳುವಳಿಕೆಗೆ ನನ್ನ ಹೃದಯಾಂತರಾಳದಿಂದ ಗುರೂಜಿಯವರಿಗೆ ವಂದಿಸುತ್ತೇನೆ.

– ಅನಿತಾ ಕೆ.ಎ.

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ